# ಮೈತ್ರಿ ಸಂದೇಶ



ಗ್ರಂಥಕರ್ತ:
ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್



## ABOUT THE BOOK

In a world plagued with intolerance for cultural, racial and religious differences, *A Message of Peace* serves as a panacea to the ills of the society. Prophetic in foresight and universal in scope, this book lays out a path to the peaceful existence of all humans based on the central theme of worshipping the One God. It is not surprising therefore that *A Message of Peace* forms the last work of a man who was destined to lay the foundation for the establishment of peace in this day and age and whose advent was prophesied in all major religions of the world. The Promised Messiah and Reformer of the Latter Days.

My countrymen! writes the Promised Messiah, A religion which does not inculcate universal compassion is no religion at all. Similarly a human being without the faculty of compassion is no human at all.

**MAITHRI SANDESHA**
**(in Kannada)**

# ಮೈತ್ರಿ ಸಂದೇಶ

*

ಗ್ರಂಥಕರ್ತ:

**ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್**

*

ಅನುವಾದಕ:

**ಮುಹಮ್ಮದ್ ಯೂಸುಫ್**

ಮಂಗಳೂರು

*

ಪ್ರಕಾಶಕರು:

**ನಝ್ಾರತ್ ನಶ್ರೊ ಇಶಾಅತ್,**

ಭಾರತ

# Maithri Sandesha

Kannada translation of Urdu Work:

پیغامِ صلح

***"Paighame Sulh"***


| | |
|---|---|
| Author | Hazrat Mirza Ghulam Ahmad |
| Translated by | Muhammad Yusuf, Mangalore |
| First Edition | 1975 |
| Second Edition | 1994 |
| Third Edition | 2008 |
| Fourth Edition<br>Reviewed by | 2018<br>Moulavi Inamullah |
| Type Setting | U.Basheer Ahmad, Manjeshwar;<br>Inamullah, Mangaluru |
| Published by | Nazarat Nashro - Isha'at, Qadian,<br>Distt. Gurdaspur, Punjab -143516 |
| Copies | 1000 |
| Printed at | Fazl-e-Umar Printing Press, Qadian |

| **ವಿಷಯಾನುಕ್ರಮಣಿಕೆ** | **ಪುಟ** |
| --- | --- |
| ಮುನ್ನುಡಿ | 1 |
| ಪ್ರಾರ್ಥನೆ | **3** |
| ಸಂದೇಶ | 3 |
| ದೇವನ ಕೃಪೆ ಸರ್ವವ್ಯಾಪಕವಾಗಿದೆ | 5 |
| ಪ್ರತಿಯೊಂದು ಸಮುದಾಯದಲ್ಲೂ ಪ್ರವಾದಿ | 7 |
| ಐಕ್ಯದ ಪ್ರಾಧಾನ್ಯ | 9 |
| ನನ್ನ ಅನುಭವ | 13 |
| ಸಂಕುಚಿತ ವಿಶ್ವಾಸಗಳು | 15 |
| ಅಸಹಿಷ್ಣುತೆಯ ಆರಂಭ | 18 |
| ಪ್ರವಾದಿನಿಂದೆ ವಿಷ | 20 |
| ಆರ್ಯ ಸಮಾಜ ಮತ್ತು ವೇದ | 22 |
| ಒಪ್ಪಂದ ಮಾಡಿಕೊಳ್ಳೋಣ | 24 |
| ಕಲಹಗಳಿಗೆ ಕಾರಣ | 26 |
| ಮುಸ್ಲಿಮರಿಗೆ ಉಪದೇಶ | 28 |
| ಕಾಲದ ಸಾಕ್ಷ್ಯ | 33 |
| ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉಂಟುಮಾಡಿದ ಪರಿವರ್ತನೆ | 34 |
| ಇಸ್ಲಾಂ ಪ್ರಚಾರಗೊಂಡುದು ಹೇಗೆ? | 37 |
| ಇಸ್ಲಾಮಿನ ಅಧ್ಯಾಪನೆ | 42 |

# ಮುನ್ನುಡಿ

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್[ಅ] ತಮ್ಮ ಮರಣದ ಎರಡು ದಿನ ಮೊದಲು ಬರೆದ ಒಂದು ಉರ್ದು ಉಪನ್ಯಾಸದ ಕನ್ನಡಾನುವಾದವಾಗಿದೆ ಇದು.

1908ನೇ ಇಸವಿ, ಮೇ 31ರಂದು ಲಾಹೋರಿನಲ್ಲಿ ಸೇರಲು ನಿಶ್ಚಯಿಸಿದ ಸಮ್ಮೇಳನಕ್ಕಾಗಿ ತಯಾರಿಸಲ್ಪಟ್ಟ ಈ ಪ್ರಬಂಧವು ಆ ಮಹಾತ್ಮರ ಮರಣದ ನಿಮಿತ್ತ, ಜೂನ್ 21ರಂದು ಲಾಹೋರ್ ಯುನಿವರ್ಸಿಟಿ ಹಾಲಿನಲ್ಲಿ ಜಸ್ಟಿಸ್ ಪಿ.ಸಿ. ಚಟರ್ಜಿಯರ ಅಧ್ಯಕ್ಷತೆಯಲ್ಲಿ ಸೇರಿದ ಸಮ್ಮೇಳನದಲ್ಲಿ ಓದಲ್ಪಟ್ಟಿತು. ಹಿಂದು ಮತ್ತು ಮುಸ್ಲಿಂ ಧುರೀಣರೊಳಗೊಂಡ ಐದು ಸಾವಿರಕ್ಕೂ ಮಿಕ್ಕಿದ ಜನರು ಭಾಗವಹಿಸಿದ ಆ ಸಭೆಯಲ್ಲಿ ಪಂಜಾಬ್ ಚೀಫ್ ಕೋರ್ಟ್ ವಕೀಲರಾಗಿದ್ದ ಖಾಜಾ ಕಮಾಲುದ್ದೀನ್ ಸಾಹೇಬರು ಇದನ್ನು ಓದಿದರು.

ಭಾರತದಲ್ಲಿ, ಮುಖ್ಯವಾಗಿ ಪಂಜಾಬಿನಲ್ಲಿ ಆ ಕಾಲದಿಂದಲೇ ಗೋಚರಿಸುತ್ತಿದ್ದ, ಹಿಂದು–ಮುಸ್ಲಿಂ ಪೈಪೋಟಿಯು, ಭಾರತ ಭೂಖಂಡದ ಶಾಂತಿಯನ್ನೂ ಕ್ಷೇಮಾಭಿವೃದ್ಧಿಗಳನ್ನೂ ಕೆಡಿಸಿ ದುರಾವಸ್ಥೆಯೆಡೆಗೆ ಕೊಂಡೊಯ್ಯುವುದೆಂದು ತನ್ನ ಆಧ್ಯಾತ್ಮಿಕ ದೂರದೃಷ್ಟಿಯಿಂದ ಮುಂಚಿತವಾಗಿಯೇ ತಿಳಿದ ಆ ಮಹಾಪುರುಷರು ಹಿಂದುಗಳನ್ನೂ ಮುಸ್ಲಿಮರನ್ನೂ ಪರಸ್ಪರ ಒಂದುಗೂಡಿಸುವ ಒಂದು ಮಹಾ ಪ್ರಯತ್ನದಲ್ಲಿ ತೊಡಗಿದ್ದರು.

ಹಝ್ರತ್ ಅಹ್ಮದ್[ಅ] ಲಾಹೋರಿನಲ್ಲಿ ತಮ್ಮ ಕೊನೆಯ ಯಾತ್ರೆ ನಡೆಸಿದ ಸಂದರ್ಭದಲ್ಲಿ ಹಲವು ಪ್ರಸಿದ್ಧ ಹಿಂದು ಮುಸ್ಲಿಂ ಧುರೀಣರು ಆ ಮಹಾತ್ಮರನ್ನು

ಭೇಟಿ ಮಾಡಿದ್ದರು. ಆಗ, ತಾನು ಒಂದು ಮೈತ್ರಿ ಸಂಘವನ್ನು ಸ್ಥಾಪಿಸಲು ಉದ್ದೇಶಿಸಿರುವೆನೆಂದೂ ಅದಕ್ಕೆ ಆವಶ್ಯವಿರುವ ಸಹಾಯ ಸಹಕಾರಗಳನ್ನು ನೀಡಬೇಕೆಂದೂ ಅವರೊಡನೆ ಹಝ್ರತ್ ಅಹ್ಮದ್[ಅ] ಅಪೇಕ್ಷಿಸಿದ್ದರು. ಹಾಗೆ ಲಾಹೋರಿನ ಸಮ್ಮೇಳನವು ಏರ್ಪಟ್ಟಿತು.

ಹಿಂದು ಮುಸ್ಲಿಂ ಮೈತ್ರಿಗಾಗಿ ಕೊನೆಯ ತನಕ ಪ್ರಯತ್ನಿಸಿದ ಓರ್ವ ಮಹಾ ಪುರುಷರ ಈ ವಿಶಿಷ್ಟ ಕೃತಿಯನ್ನು ಕನ್ನಡದಲ್ಲಿ ಭಾಷಾಂತರಿಸಲು ಸಾಧ್ಯವಾದುದರಲ್ಲಿ ನನಗೆ ಬಹು ಸಂತೋಷವಿದೆ. ಉರ್ದುವಿನಿಂದ ಕನ್ನಡಕ್ಕೆ ಭಾಷಾಂತರಿಸುವ ಕಾರ್ಯದಲ್ಲಿ ನನಗೆ ಸಕಲ ನೆರವಿತ್ತು ಸಹಕರಿಸಿ ಪ್ರೋತ್ಸಾಹಿಸಿದವರಿಗೂ ಇದನ್ನು ಪ್ರಕಟಿಸುವುದರಲ್ಲಿ ಸಕಲ ಸಹಕಾರಗಳನ್ನಿತ್ತ ಎಲ್ಲರಿಗೂ ನಾನು ಋಣಿಯಾಗಿದ್ದೇನೆ.

ಮತೀಯ ಘರ್ಷಣೆಯ ಕರಿನೆರಳಿನಲ್ಲಿ ಕಾಲಕಳೆಯುವ ಭಾರತ ಭೂಖಂಡದ ಜನಕೋಟಿ ಈ ಯುಗಪುರುಷರ ಉಪದೇಶ, ನಿರ್ದೇಶನಗಳನ್ನನುಸರಿಸಿ ವರ್ತಿಸಲು ಪ್ರಯತ್ನಿಸಿದರೆ, ಹಾ! ಎಷ್ಟು ಒಳ್ಳೆಯದು !

**ಅನುವಾದಕ**

**ಮಂಜೇಶ್ವರ**
3–2–1975

## ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರ

# ಮೈತ್ರಿ ಸಂದೇಶ

### ಪ್ರಾರ್ಥನೆ

ಸರ್ವಶಕ್ತನಾದ ನನ್ನ ಪ್ರಭುವೇ, ಪ್ರಿಯ ಮಾರ್ಗದರ್ಶಕನೇ, ಸತ್ಯಸಂಧರೂ ನಿಷ್ಕಳಂಕರೂ ಆದ ಭಕ್ತರು ನಿನ್ನ ಸಾಮೀಪ್ಯವನ್ನು ಯಾವ ಮಾರ್ಗವನ್ನನುಸರಿಸಿ ಪಡೆಯುತ್ತಾರೋ ಆ ಮಾರ್ಗದಲ್ಲಿ ನೀನು ನಮ್ಮನ್ನು ನಡೆಸು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿಗಳಿಂದ (ಭೌತಿಕೇಚ್ಛೆಗಳಿಂದ) ಸಂತೃಪ್ತಿಯನ್ನು ಪಡೆಯುವ ದುರ್ಮಾರ್ಗಿಗಳ ಮಾರ್ಗವನ್ನನುಸರಿಸದಂತೆ ನಮ್ಮನ್ನು ರಕ್ಷಿಸು.

### ಸಂದೇಶ

ಸ್ನೇಹಿತರೇ, ಹಿಂದುಗಳೂ ಮುಸ್ಲಿಮರೂ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ, ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ, ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಾಮೂಹಿಕ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ನಿಷ್ಕಳಂಕತೆಯಿಂದಲೂ ಸದುದ್ದೇಶದಿಂದಲೂ ಪರಸ್ಪರ ಮಿತ್ರರಂತೆ

ವರ್ತಿಸಿ ಧಾರ್ಮಿಕವೂ ಲೌಕಿಕವೂ ಆದ ಎಲ್ಲ ವೈಷಮ್ಯಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಪರಸ್ಪರ ಸಹಕರಿಸಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶ ಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಧರ್ಮವು ಯಥಾರ್ಥವಾದ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹವನ್ನು ಪ್ರತಿಯೊಂದು ಜಾತಿಯವರಿಗೆ ನೀಡಿರುವನು. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂತಹ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬೀಯರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನೀಯರಿಗೂ ಜಪಾನೀಯರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವನ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ, ನಕ್ಷತ್ರಾದಿಗಳು ಪ್ರಕಾಶವನ್ನು ಕೊಡುತ್ತವೆಯಲ್ಲದೆ ಅವುಗಳು ಮಾಡಬೇಕೆಂದು ದೇವನು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ಅವು ನಿರ್ವಹಿಸುತ್ತವೆ. ಎಲ್ಲ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನವನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಮನುಷ್ಯ ಕುಲಕ್ಕೆ ಒಳಿತುಂಟುಮಾಡಬೇಕೆಂದೂ ಸಂಕುಚಿತ ಮನೋಭಾವವಾಗಲೀ ಅಸಹಾನುಭೂತಿಯಾಗಲೀ ನಮ್ಮಲ್ಲಿ ಇರಬಾರದೆಂದೂ ಪರಮಾತ್ಮನ ಈ ವಿಶಾಲವಾದ ಉದಾರತೆ ನಮಗೆ ಕಲಿಸಿಕೊಡುತ್ತದೆ.

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳಿಗೊಪ್ಪುವಂತೆ ತಮ್ಮ ನಡವಳಿಕೆಗಳನ್ನು ರೂಪಿಸದೆಯೂ ಇದ್ದರೆ ಅವರು ಬೇಗನೆ ನಾಶವಾಗುವರು. ಈ ಉಲ್ಲಂಘನೆಯ ದುಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ, ಅವರ ಮುಂದಿನ ಸಂತಾನಗಳ ಮೇಲೆ ಸಹ ಉಂಟಾಗುವುದು. ಪರಮಾತ್ಮನ ಗುಣ ವಿಶೇಷಗಳನ್ನು ತಮ್ಮ ಜೀವಿತದಲ್ಲಿ ಅನುಸರಿಸುವುದು

ಮಾನವರ ಬಾಳಿಕೆಗಿರುವ ಒಂದು ಜೀವಜಲವಾಗಿದೆ. ಶಾಂತಿ ಸಮಾಧಾನಗಳ ಉದ್ಭವ ಸ್ಥಾನವಾದ ಪವಿತ್ರ ದೈವಿಕ ಗುಣಗಳನ್ನನುಸರಿಸಿ ಜೀವನ ಕ್ರಮವನ್ನು ರೂಪಿಸುವುದರಲ್ಲಿ ಮಾತ್ರ ಮನುಷ್ಯನ ಶಾರೀರಿಕ ಮತ್ತು ಆಧ್ಯಾತ್ಮಿಕ ಜೀವನವು ಆಶ್ರಯಿಸಿದೆ. ಈ ಪರಮಾರ್ಥವನ್ನು ಲೋಕಾರಂಭದಿಂದ ಈವರೆಗಿನ ಎಲ್ಲ ದೇಶಗಳ ಸತ್ಯಸಂಧರಾದ ದೇವದಾಸರು ಸಾಕ್ಷಿಗೊಳಿಸಿದ್ದಾರೆ.

## ದೇವನ ಕೃಪೆ ಸರ್ವವ್ಯಾಪಕವಾಗಿದೆ

ಈ ವಿಶಾಲವಾದ ತತ್ವವನ್ನು ಪ್ರಬೋಧಿಸುವ ಒಂದು ವಾಕ್ಯದಿಂದ ಪರಮಾತ್ಮನು ಪವಿತ್ರ ಖುರ್‌ಆನಿನ 'ಫಾತಿಹ' ಎಂಬ ಪ್ರಥಮ ಅಧ್ಯಾಯವನ್ನು ಆರಂಭಿಸಿರುವನು. ನೋಡಿರಿ: **'ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್'** ಎಂದರೆ "ಸರ್ವ ಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ದೇವನು ಮಾತ್ರ ಎಲ್ಲ ಸ್ತುತಿಗಳಿಗೆ ಅರ್ಹನು". ಇಲ್ಲಿ ಲೋಕಗಳು ಎಂಬ ಶಬ್ದದಲ್ಲಿ ಎಲ್ಲ ಜನಾಂಗದವರೂ ಎಲ್ಲ ಕಾಲದವರೂ ಎಲ್ಲ ರಾಜ್ಯದವರೂ ಒಳಪಡುತ್ತಾರೆ. ದೇವಾನುಗ್ರಹಗಳು ತಮಗೆ ಮಾತ್ರ ಲಭಿಸಿರುವುದೆಂದು ಅಭಿಪ್ರಾಯಪಟ್ಟು ಇತರ ಜನಾಂಗದವರು ಮನುಷ್ಯ ವರ್ಗದವರಲ್ಲವೆಂಬ ರೀತಿಯಲ್ಲೂ, ದೇವನು ಅವರನ್ನು ಸೃಷ್ಟಿಸಿದ ನಂತರ ಅವರನ್ನು ಮರೆತಿರುವನೆಂದೋ ಕೈಬಿಟ್ಟಿರುವನೆಂದೋ ಅವರು ಅವನ ಸೃಷ್ಟಿಗಳೇ ಅಲ್ಲವೆಂಬ ರೀತಿಯಲ್ಲೂ ಭಾವಿಸಿ ದೇವನ ಸರ್ವವ್ಯಾಪಕವಾದ ಕೃಪಾಕಟಾಕ್ಷವನ್ನು ಇತರರಿಗೆ ಅಲ್ಲಗಳೆಯುವ ಎಲ್ಲ ಜಾತಿಯವರಿಗೂ ಈ ಖುರ್‌ಆನ್ ವಾಕ್ಯವು ಒಂದು ಖಂಡನೆಯಾಗಿದೆ. ಪರಮಾತ್ಮನಿಂದ ನಿಯೋಜಿಸಲ್ಪಟ್ಟ ಎಲ್ಲ ಪ್ರವಾದಿಗಳು ಮತ್ತು ಸಂದೇಶವಾಹಕರು ಯಹೂದಿ ವಂಶದಲ್ಲಿ ಮಾತ್ರ ಜನಿಸಿರುವರೆಂದು ಇಂದಿಗೂ ಯಹೂದಿಯರೂ ಕ್ರೈಸ್ತರೂ ನಂಬುತ್ತಾರೆ. ಇತರ ಜನಾಂಗದವರು ದುರ್ಮಾರ್ಗದಲ್ಲಿಯೂ ಅಂಧಕಾರದಲ್ಲಿಯೂ ನಡೆಯುವುದನ್ನು ನೋಡಿಯೂ ಪರಮಾತ್ಮನು ಅವರ ಕಡೆಗೆ ಸಿಟ್ಟಿನಿಂದ ಗಮನವನ್ನು ಹರಿಸದೆಯೂ ಕರುಣೆಯನ್ನು ತೋರಿಸದೆಯೂ ಇರುವನೆಂದಾಗಿದೆ ಇವರ ವಿಶ್ವಾಸ! ಉದಾಹರಣೆಗೆ, ತಾನು ಇಸ್ರಾಈಲ್‌ನ ಕುರಿಗಳಿಗಾಗಿ (ಎಂದರೆ ಯಹೂದಿಯರಿಗಾಗಿ) ಬಂದಿರುವನೆಂದು ಮಹಾತ್ಮ ಯೇಸುಕ್ರಿಸ್ತರು ಹೇಳಿರುವುದಾಗಿ ಬೈಬಲಿನಲ್ಲಿದೆ. ಯೇಸುಕ್ರಿಸ್ತರು ತಾವು ದೇವನೆಂದು ನಿಜವಾಗಿಯೂ ವಾದಿಸಿದ್ದರೆಂದು ಭಾವಿಸಿದರೆ ಈ ರೀತಿಯ

ಸಂಕುಚಿತ ಪ್ರವೃತ್ತಿಯ ವಚನಗಳು ಅವರ ಬಾಯಿಯಿಂದ ಬಂದಿವೆಯೆಂದು ನಂಬುವುದು ಆಶ್ಚರ್ಯಕರವಾಗಿದೆ. ಅವರು ದೇವನೆಂದು ವಾದಿಸಿದ್ದರೆ ಈ ವಾಕ್ಯದ ಅರ್ಥ ಅವರು ಕೇವಲ ಇಸ್ರಾಈಲ್ ವಂಶಜರ ದೇವನೆಂದೂ ಇತರ ಜಾತಿಗಳ ದೇವನಲ್ಲವೆಂದೂ ಇತರ ಜಾತಿಗಳ ಸುಧಾರಣೆಯಲ್ಲಿಯೂ ಯಶೋಭಿವೃದ್ಧಿಯಲ್ಲಿಯೂ ಅವರಿಗೆ ಸಹಾನುಭೂತಿ ಇರಲಿಲ್ಲವೆಂಬುದೂ ಮೇಲಿನ ವಾಕ್ಯದಿಂದ ಸ್ಪಷ್ಟ. ಯಹೂದಿಯರ ಮತ್ತು ಕ್ರೈಸ್ತರ ಅಭಿಪ್ರಾಯ ಪ್ರಕಾರ ಸಕಲ ಪ್ರವಾದಿಗಳು ಮತ್ತು ಸಂದೇಶವಾಹಕರು ಅವರ ವಂಶದಲ್ಲಿ ಮಾತ್ರ ಜನಿಸಿರುವರು. ಅವರ ವಂಶದವರಿಗೆ ಮಾತ್ರ ದೈವಿಕ ಗ್ರಂಥಗಳು ಅವತೀರ್ಣವಾದವು ಎಂದು ಸಹ ಅವರ ವಿಶ್ವಾಸವಾಗಿದೆ. ಯೇಸುಕ್ರಿಸ್ತರಿಗೆ ಕೊನೆಯದಾಗಿ ದೇವನು ತನ್ನ ವಚನಗಳನ್ನು ಅನುಗ್ರಹಿಸಿದನೆಂದು ಕ್ರೈಸ್ತರು ನಂಬುತ್ತಾರೆ. ಅನಂತರ ದೇವ ಸಂದೇಶ ಬರುವುದು ಕೊನೆಗೊಂಡಿತೆಂದು ಅವರು ನಂಬುತ್ತಾರೆ. ಇಂತಹ ಅಭಿಪ್ರಾಯಗಳನ್ನೇ ಆರ್ಯಸಮಾಜದವರು ಸಹ ಹೊಂದಿದ್ದಾರೆ. ಎಂದರೆ ಯಹೂದಿಯರು ಮತ್ತು ಕ್ರೈಸ್ತರು ದೇವಾನುಗ್ರಹಗಳೂ ದೇವವಾಣಿಗಳೂ ತಮಗೆ ಮಾತ್ರ ದೊರಕಿವೆಯೆಂದೂ ಬೇರೆ ಯಾರಿಗೂ ಈ ರೀತಿಯ ಅನುಗ್ರಹಗಳು ದೊರೆತಿಲ್ಲವೆಂದೂ ಅಭಿಮಾನಿಸುವ ಹಾಗೆಯೇ ದುರದೃಷ್ಟವಶಾತ್ ಆರ್ಯಸಮಾಜದವರು ಸಹ ಇದೇ ರೀತಿಯ ಅಭಿಪ್ರಾಯವನ್ನು ಹೊಂದಿದ್ದಾರೆ. ಆರ್ಯಾವರ್ತದ ಗಡಿಯಿಂದ ಹೊರಗೆ ದೈವಿಕ ಸಂದೇಶವು ಯಾರಿಗೂ ತಲಪಿಲ್ಲವೆಂದು ಇವರ ವಿಶ್ವಾಸವಾಗಿದೆ. ನಾಲ್ವರು ಋಷಿಗಳಿಗೆ ಅನುಕಾಲಿಕವಾಗಿ ವೇದವು ಪುನಃ ಪುನಃ ಅವತ್ತೀರ್ಣವಾಗುತ್ತದೆಯೆಂದು ಇವರ ವಿಶ್ವಾಸವಾಗಿದೆ. ವೈದಿಕ ಸಂಸ್ಕೃತದಲ್ಲಿಯಲ್ಲದೆ ಇತರ ಭಾಷೆಗಳಲ್ಲಿ ದೇವನು ತನ್ನ ಸಂದೇಶವನ್ನು ಕಳುಹಿಸುವುದಿಲ್ಲವೆಂದು ಇವರ ಅಭಿಪ್ರಾಯವಾಗಿದೆ.

ಆದುದರಿಂದ, ಈ ಎರಡು ಜನಾಂಗದವರು ದೇವನನ್ನು ಸರ್ವಲೋಕಗಳ ಸೃಷ್ಟಿಕರ್ತನೆಂದು ನಂಬುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ದೇವನು ಸರ್ವಲೋಕಗಳ ಪ್ರಭುವೆಂದು ಇವರ ವಿಶ್ವಾಸವಾಗಿದ್ದರೆ, ಅವನು ಇವರೊಡನೆ ಮಾತ್ರ ಸ್ಥಿರವಾದ ಸಂಬಂಧ ಸ್ಥಾಪಿಸಿರುವನೆಂದು ಇವರು ವಿಶ್ವಾಸವಿಡುವುದು ಅಸಾಧ್ಯ. ಇವರ ವಿಶ್ವಾಸ ಪ್ರಕಾರ ದೇವನು ಪಕ್ಷಪಾತಿಯೆಂಬುದು ಸ್ಪಷ್ಟ. ಈ ನಂಬಿಕೆಗಳನ್ನು ಹೋಗಲಾಡಿಸಲಿಕ್ಕಾಗಿಯೇ, "ದೇವನು ಸರ್ವಲೋಕಗಳ, ಸರ್ವಜನಾಂಗಗಳ

ಪ್ರಭು" ಎಂಬ ಆಶಯವನ್ನೊಳಗೊಂಡ ವಚನದಿಂದ ಪವಿತ್ರ ಖುರ್‌ಆನ್ ಪ್ರಾರಂಭಿಸಲ್ಪಟ್ಟಿದೆ.

## ಪ್ರತಿಯೊಂದು ಸಮುದಾಯದಲ್ಲೂ ಪ್ರವಾದಿ

ಪರಮಾತ್ಮನು ಯಾವುದಾದರೊಂದು ಪ್ರತ್ಯೇಕ ಜನಾಂಗದವರಲ್ಲಿ ಅಥವಾ ಪ್ರತ್ಯೇಕ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು ನಿಯೋಜಿಸಿರುವನೆಂಬ ವಿಶ್ವಾಸವು ಸರಿಯಲ್ಲವೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಸ್ಥಳಗಳಲ್ಲಿ ದೇವನು ನುಡಿದಿರುವನು.

ಯಾವುದೇ ಗೋತ್ರವನ್ನಾಗಲೀ ದೇಶವನ್ನಾಗಲೀ ದೇವನು ಮರೆತಿಲ್ಲ. ಈ ಸಂಗತಿಯನ್ನು ಪವಿತ್ರ ಖುರ್‌ಆನಿನಲ್ಲಿ ಹಲವೆಡೆಗಳಲ್ಲಿ ಉಪಯುಕ್ತ ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ಪರಮಾತ್ಮನು ಎಲ್ಲ ಸಮುದಾಯದವರಿಗೂ ದೇಶದವರಿಗೂ ಅವರ ಭೌತಿಕ ಆವಶ್ಯಕತೆಗಳನ್ನು ಪೂರೈಸಲು ಸಕಲ ವಿಧ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಹಾಗೆಯೇ ಎಲ್ಲ ಜನಾಂಗದವರ ಮತ್ತು ಎಲ್ಲ ದೇಶದವರ ಆಧ್ಯಾತ್ಮಿಕ ಆವಶ್ಯಕತೆಗಳಿಗಾಗಿಯೂ ಎಲ್ಲ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಒಂದೆಡೆ ಹೀಗೆ ಹೇಳಲಾಗಿದೆ: **'ವ ಇಮ್ಮಿನ್ ಉಮ್ಮತಿನ್ ಇಲ್ಲಾ ಖ಼ಲಾ ಫೀಹಾ ನಧೀರ್'** ಎಂದರೆ, **"**ಒಬ್ಬ ಮುನ್ನೆಚರಿಕೆಯನ್ನೀಯುವವನು ಬಂದಿರದ ಯಾವುದೇ ಸಮುದಾಯವಿಲ್ಲ.**"** **(35: 25)**

ಆದುದರಿಂದ ನಾವೆಲ್ಲರೂ ವಿಶ್ವಾಸವಿಡಬೇಕಾದ ಸಕಲ ಸಂಪೂರ್ಣನೂ ಸತ್ಯಸ್ವರೂಪನೂ ಆದ ಪರಮಾತ್ಮನು ಸರ್ವಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂದು ವಿವಾದವಿಲ್ಲದೆ ಸ್ವೀಕರಿಸಬೇಕಾಗಿದೆ. ಅವನ ಪರಿಪಾಲನೆಯು ಯಾವುದಾದರೊಂದು ಪ್ರತ್ಯೇಕ ಜಾತಿಗೋ, ಪ್ರತ್ಯೇಕ ಕಾಲಕ್ಕೋ, ಪ್ರತ್ಯೇಕ ರಾಜ್ಯಕ್ಕೋ, ಸೀಮಿತವಾದುದಲ್ಲ. ಅವನು ಎಲ್ಲ ಜಾತಿಯವರ, ಎಲ್ಲ ಕಾಲಗಳ, ಎಲ್ಲ ರಾಜ್ಯಗಳ ಪಾಲಕನಾಗಿದ್ದಾನೆ. ಸಕಲ ಅನುಗ್ರಹಗಳ ಮೂಲ ಅವನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲ ಸೃಷ್ಟಿಗಳನ್ನು ಸಾಕಿ ಸಲಹುವವನು ಅವನೇ ಆಗಿದ್ದಾನೆ.

ಎಲ್ಲ ವಸ್ತುಗಳೂ ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ರಾಜ್ಯಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವವ್ಯಾಪಕವಾಗಿದೆ. ಅವನ ಕೃಪೆಯ ಕುರಿತು ಯಾರೂ ಆಕ್ಷೇಪಿಸದ ರೀತಿಯಲ್ಲಿ ಅದು ಸರ್ವವ್ಯಾಪಿಯಾಗಿದೆ. ಪರಮಾತ್ಮನು ತನ್ನ ಅನುಗ್ರಹಗಳನ್ನು ಇತರರಿಗಲ್ಲದೆ ತಮಗೆ ಕರುಣಿಸಲಿಲ್ಲವೆಂದೋ, ಪರಮಾತ್ಮನಿಂದ ಮಾರ್ಗದರ್ಶಕ ಗ್ರಂಥಗಳು ಇತರರಿಗಲ್ಲದೆ ತಮಗೆ ಲಭಿಸಲಿಲ್ಲವೆಂದೋ, ಪರಮಾತ್ಮನು ತನ್ನ ವಚನ, ಪ್ರಕಟಣೆ ಹಾಗೂ ದೃಷ್ಟಾಂತಗಳ ಮುಖಾಂತರ ಹಿಂದಿನ ಕಾಲದಲ್ಲಿ ಅಲ್ಲದೆ ತಮ್ಮ ಕಾಲದಲ್ಲಿ ಪ್ರತ್ಯಕ್ಷನಾಗಲಿಲ್ಲವೆಂದೋ ಹೇಳಲು ಯಾವುದೇ ಜನಾಂಗಕ್ಕೂ ಅವನು ಎಡೆಗೊಡಲಿಲ್ಲ. ಹಾಗೆ ಆ ಸರ್ವವಲ್ಲಭನು ತನ್ನ ಭೌತಿಕವೂ ಆಧ್ಯಾತ್ಮಿಕವೂ ಆದ ಅನುಗ್ರಹಗಳಿಂದ ಯಾವುದಾದರೊಂದು ಸಮುದಾಯವನ್ನೋ ಕಾಲವನ್ನೋ ಬಿಡದೆ ತನ್ನ ಕೃಪಾವಿತರಣೆಯನ್ನು ಸರ್ವವ್ಯಾಪಕವನ್ನಾಗಿಯೂ ನಿತ್ಯವನ್ನಾಗಿಯೂ ಮಾಡಿರುವನು.

ಹೀಗೆ ಪರಮಾತ್ಮನ ಅನುಗ್ರಹ ನಿಸ್ಸೀಮವೂ ಸರ್ವವ್ಯಾಪಕವೂ ಆಗಿರುವಾಗ, ಅವನ ದಿವ್ಯಗುಣಗಳನ್ನು ನಾವು ನಮ್ಮ ಜೀವನ ಕ್ರಮದಲ್ಲಿ ತಂದು, ಅದಕ್ಕನುಸಾರವಾಗಿ ನಮ್ಮ ಸ್ವಭಾವಗಳನ್ನು ಕ್ರಮಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ. ಆದುದರಿಂದ, ನನ್ನ ದೇಶ ಬಾಂಧವರೇ, ಈ **"ಮೈತ್ರಿ ಸಂದೇಶ"**ವೆಂಬ ಚಿಕ್ಕ ಪುಸ್ತಕವನ್ನು ವಿನಯದಿಂದ ನಿಮ್ಮೆಲ್ಲರ ಮುಂದಿಡುತ್ತೇನೆ ಮತ್ತು ಸರ್ವಶಕ್ತನಾದ ದೇವನು ನಿಮ್ಮ ಹೃದಯಕ್ಕೆ ತನ್ನ ಸಂದೇಶವನ್ನು ಕಳುಹಿಸಿ ನನ್ನ ಸಹಾನುಭೂತಿಯ ರಹಸ್ಯವನ್ನು ನಿಮಗೆ ತಿಳಿಯಪಡಿಸಲೆಂದು ನಾನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಈ ಸ್ನೇಹದ ಕಾಣಿಕೆಯನ್ನು ನನ್ನ ಯಾವುದೇ ಸ್ವಾರ್ಥ ಅಥವಾ ಭೌತಿಕ ಉದ್ದೇಶದೊಂದಿಗೆ ನೀವು ಜೋಡಿಸದಂತೆ ದೇವನು ಮಾಡಲಿ. ಪ್ರಿಯ ಸಹೋದರರೇ, ಪರಲೋಕದ ಸಂಗತಿಯು ಬಹುಜನರಿಗೆ ಗೋಪ್ಯವಾದುದಾಗಿದೆ. ಅದರ ರಹಸ್ಯವು ಪರಮಾತ್ಮನಿಗಾಗಿ ಆತ್ಮಾರ್ಪಣೆ ಮಾಡುವವರಿಗೆ, ಮರಣ ಬರುವ ಮೊದಲೇ ಮರಣವನ್ನು ಸ್ವಾಗತಿಸುವವರಿಗೆ ಮಾತ್ರವೇ ವ್ಯಕ್ತವಾಗುತ್ತದೆ. ಆದರೆ ಪ್ರಪಂಚದ ಗುಣದೋಷಗಳನ್ನು ದೂರದೃಷ್ಟಿಯಿರುವ ಪ್ರತಿಯೊಬ್ಬ ಬುದ್ಧಿವಂತನಿಗೆ ತಿಳಿಯಲು ಸಾಧ್ಯ.

# ಐಕ್ಯದ ಪ್ರಾಧಾನ್ಯ

ಯಾವುದೇ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಐಕ್ಯದ ವರದಾನಗಳಿಂದ ತನ್ನನ್ನು ಬೇರ್ಪಡಿಸಲು ಯಾವನೇ ಬುದ್ಧಿವಂತನು ಸಿದ್ಧನಾಗಲಾರನು. ಹಿಂದು ಮತ್ತು ಮುಸ್ಲಿಮ್ ಈ ರಾಷ್ಟ್ರದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು ಎಂದರೆ, ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವರಾದರೆ, ಅದು ಅಸಂಭವ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯಕ್ಕೆ ಏನಾದರೂ ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯಕ್ಕೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನ ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಾಶವನ್ನುಂಟು ಮಾಡಲು ನೋಡುವನಾದರೆ, ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತನಾಗುವನು. ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಪ್ರೀತಿಯಿಂದಲೂ ಮುನ್ನಡೆಯುವುದು ವಿವೇಕಯುತವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಬಿಟ್ಟು ಅನುಕಂಪಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವನ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ

ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲಜಲ ನಿಮಗೆ ಅತ್ಯಾವಶ್ಯಕವಾಗಿದೆ.

ಎರಡು ಪಕ್ಷಗಳಾಗಿರುವ ನಿಮಗೆ ಸಮಾಧಾನವೂ ಶಾಂತಿಯೂ ಅತ್ಯಾವಶ್ಯಕವಾಗಿರುವ ಕಾಲಘಟ್ಟದಲ್ಲೇ ನಾನು ನಿಮ್ಮನ್ನು ಮೈತ್ರಿಗಾಗಿ ಆಮಂತ್ರಿಸುತ್ತಿದ್ದೇನೆ. ಲೋಕದಲ್ಲಿ ಹಲವಿಧ ಆಪತ್ತುಗಳು ಸಂಭವಿಸುತ್ತಿವೆ. ಭೂಕಂಪಗಳೂ ಕ್ಷಾಮಗಳೂ ಉಂಟಾಗುತ್ತಿವೆ. ಪ್ಲೇಗು ನಮ್ಮನ್ನು ಇನ್ನೂ ಬಿಟ್ಟು ಹೋಗಿಲ್ಲ. ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಕುಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲ ಭಯಂಕರವಾದ ವಿಪತ್ತುಗಳೂ ನಾಶನಷ್ಟಗಳೂ ಸಂಭವಿಸುವುವು ಎಂದು ಪರಮಾತ್ಮನು ನನಗೆ ತಿಳಿಸಿರುವನು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ, ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸುವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ ಹುಚ್ಚರಂತೆ ಆಗುವರು. ಆದುದರಿಂದ, ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ ಸಂಧಾನ ಮಾಡಲಿ. ಐಕ್ಯಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯವನ್ನು ತ್ಯಜಿಸಲಿ. ಇಲ್ಲವಾದರೆ ಅನ್ಯೋನ್ಯ ಶತ್ರುತ್ವದ ಎಲ್ಲ ಪಾಪವು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು.

ಧಾರ್ಮಿಕವಾದ ಭಿನ್ನತೆಯು ಸೌಹಾರ್ದಕ್ಕೆ ತಡೆಯಾಗಿದ್ದು, ಇದು ದಿನೇ ದಿನೇ ಹೃದಯದಲ್ಲಿ ವೈರವನ್ನು ಉಂಟುಮಾಡುತ್ತಿರುವಾಗ ಈ ಪರಸ್ಪರ ಮೈತ್ರಿ ಹೇಗೆ ಸಾಧ್ಯವಾದೀತೆಂದು ಯಾರಾದರೂ ಕೇಳಿದರೆ ನನ್ನ ಉತ್ತರ ಈ ರೀತಿಯಾಗಿದೆ: ಯಥಾರ್ಥವಾಗಿ ಧಾರ್ಮಿಕವಾದ ಭಿನ್ನತೆಯು ವಿವೇಕವನ್ನೂ ನೀತಿಯನ್ನೂ ಅನುಭವ ಜ್ಞಾನವನ್ನೂ ಆಧಾರವಾಗಿ ಇಟ್ಟುಕೊಂಡಿರುವ ಚಿಂತನೆಯ ಫಲದಿಂದಾಗಿರಬೇಕಾಗಿದೆ. ಮನುಷ್ಯನಿಗೆ ವಿವೇಕ ನೀಡಲ್ಪಟ್ಟಿರುವುದು,

ಅವನು ವಿವೇಕಕ್ಕೂ ನೀತಿಗೂ ವಿರುದ್ಧವಾದುದನ್ನಾಗಲೀ ಅನುಭವಜ್ಞಾನಕ್ಕೆ ವಿಪರೀತವಾದುದನ್ನಾಗಲೀ ಸ್ವೀಕರಿಸದಿರಲಿಕ್ಕಾಗಿಯೇ ಆಗಿದೆ. ಈ ವಾಸ್ತವಾಂಶವನ್ನು ಗ್ರಹಿಸುವುದಾದರೆ ಲಘುತರವಾದ ಅಭಿಪ್ರಾಯ ವ್ಯತ್ಯಾಸಗಳೊಂದು ಸಹ ಮೈತ್ರಿಗೆ ಅಡ್ಡಿಯಾಗಲಾರದೆಂದು ಮನದಟ್ಟಾಗಬಹುದು. ಒಂದು ಸಮುದಾಯವು ಮತ್ತೊಂದು ಸಮುದಾಯದ ಭಕ್ತ್ಯಾದರಗಳಿಗೆ ಪಾತ್ರರಾದ ಪ್ರವಾದಿಗಳನ್ನೋ ಮಹಾತ್ಮರನ್ನೋ ಅವರ ಪವಿತ್ರ ಗ್ರಂಥವನ್ನೋ ಅವಹೇಳನ ಮಾಡಲೋ ಅಪಮಾನಿಸಲೋ ಪ್ರೇರಿತರಾಗುವ ರೀತಿಯ ವಿಶ್ವಾಸ, ಅಭಿಪ್ರಾಯ ವ್ಯತ್ಯಾಸಗಳೇ ಪರಸ್ಪರ ಸೌಹಾರ್ದಕ್ಕೂ ಮೈತ್ರಿಗೂ ಪ್ರತಿಬಂಧಕಗಳಾಗುತ್ತವೆ. ಈ ವಿಷಯದ ಕುರಿತು ಇಸ್ಲಾಮ್ ನೀಡುವ ಉಪದೇಶಗಳು ವೈದಿಕ ಮತ ಶಾಖೆಗಳಲ್ಲಿ ಒಂದರಲ್ಲಿ ಇಲ್ಲವಾದರೆ ಇನ್ನೊಂದರಲ್ಲಿ ಕಂಡುಬರುವುದು ಸಮಾಧಾನಕಾಂಕ್ಷಿಗಳಿಗೆ ಸಂತೋಷಜನಕವಾಗಿದೆ. ವೇದಗಳ ಅವತೀರ್ಣದ ನಂತರ ದೇವವಾಣಿಯು ಮುಕ್ತಾಯವಾಯಿತೆಂದು ನವೀನ ಪಂಥಿಗಳಾದ ಆರ್ಯಸಮಾಜದವರು ಹೇಳುತ್ತಾರೆ. ಆದರೆ ಹಿಂದೂ ಜನಾಂಗದಲ್ಲಿರುವ ಕೋಟಿಗಟ್ಟಲೆ ಜನರು ಭಕ್ತ್ಯಾದರಗಳಿಂದ ಕಾಣುವ, ವಿವಿಧ ಕಾಲಗಳಲ್ಲಿ ಜನ್ಮತಾಳಿದ ಅವತಾರಗಳು ತಮಗೆ ದೇವಾನುಗ್ರಹೀತ ದಿವ್ಯವಾಣಿಗಳು ಲಭಿಸಿವೆಯೆಂದು ವಾದಿಸಿ ಮೇಲಿನ ವಿಶ್ವಾಸವು ಅವಾಸ್ತವವೆಂದು ತೋರಿಸಿದ್ದಾರೆ. ಈ ದೇಶದಲ್ಲಿ ಸಾಮಾನ್ಯವಾಗಿಯೂ ಬಂಗಾಳದಲ್ಲಿ ವಿಶಿಷ್ಟವಾಗಿಯೂ ಬಹಳ ಗೌರವಿಸಲ್ಪಡುವ ಒಬ್ಬ ಮಹಾ ಪುರುಷರು ಶ್ರೀ ಕೃಷ್ಣರಾಗಿದ್ದಾರೆ. ಅವರು ತನಗೆ ದೇವವಾಣಿ ಲಭಿಸಿದೆಯೆಂದು ಘೋಷಿಸಿದವರಾಗಿದ್ದಾರೆ. ಅವರ ಅನುಯಾಯಿಗಳು ಅವರನ್ನು ಮನುಷ್ಯರೂಪದಲ್ಲಿ ಅವತರಿಸಿದ ದೇವನೆಂದು ನಂಬುತ್ತಿರುವರಾದರೂ ಅವರು ತನ್ನ ಕಾಲದ ಒಬ್ಬ ಪ್ರವಾದಿಯೂ ಪರಮಾತ್ಮನ ವಚನಾಮೃತದಿಂದ ಅನುಗ್ರಹೀತರಾದ ಒಬ್ಬ ಅವತಾರ ಪುರುಷರೂ ಆಗಿದ್ದಾರೆಂಬುದು ನಿಸ್ಸಂಶಯವಾಗಿದೆ.

ಇದೇ ಪ್ರಕಾರ ಈ ಅಂತ್ಯ ಕಾಲದಲ್ಲಿ ಹಿಂದು ಸಮುದಾಯದಲ್ಲಿ ಆವಿರ್ಭವಿಸಿದ ಓರ್ವ ಮಹಾಪುರುಷರು ಬಾಬಾ ನಾನಕ್ ಆಗಿರುವರು. ಅವರಿಗೆ ಈ ರಾಜ್ಯದಲ್ಲೆಲ್ಲೂ ಆದರಣೆಯಿದೆ. ಸಿಕ್ಖರೆಂದು ಕರೆಯಲ್ಪಡುವ ಅವರ ಅನುಯಾಯಿಗಳ ಸಂಖ್ಯೆ ಈ ರಾಜ್ಯದಲ್ಲಿ 20 ಲಕ್ಷಕ್ಕೆ ಕಡಿಮೆಯಾಗಲಾರದು. ಬಾಬಾ ನಾನಕ್, ತನಗೆ ದೇವವಾಣಿಗಳು ಲಭಿಸಿವೆ ಎಂದು 'ಗ್ರಂಥಸಾಹಿಬ್'ನಲ್ಲಿಯೂ

‘ಜನಮ್‌ಸಾಖಿ’ಗಳಲ್ಲಿಯೂ ವಾದಿಸಿದ್ದರು. ಅವರ ‘ಜನಮ್‌ಸಾಖಿ’ಯಲ್ಲಿ ಒಂದೆಡೆ ಇಸ್ಲಾಂ ಸತ್ಯ ಧರ್ಮವೆಂದು ತನಗೆ ಪರಮಾತ್ಮನಿಂದ ತಿಳಿದುಬಂದಿದೆ ಎಂದು ಹೇಳಲಾಗಿದೆ. ಅವರು ಮಕ್ಕಕ್ಕೆ ತೀರ್ಥಾಟನೆಗಾಗಿ ಹೋದದ್ದೂ ಇಸ್ಲಾಮಿನ ಎಲ್ಲ ವಿಶ್ವಾಸ ಪ್ರಮಾಣಗಳನ್ನು ಸ್ವೀಕರಿಸಿದ್ದೂ ಇದೇ ಕಾರಣದಿಂದಾಗಿದೆ. ಅವರಿಂದ ಅದ್ಭುತಗಳೂ ದೃಷ್ಟಾಂತಗಳೂ ಪ್ರಕಟವಾಗಿದ್ದವೆಂಬುದು ನಿಸ್ಸಂಶಯವಾಗಿ ಸಾಬೀತಾದ ವಿಷಯಗಳಾಗಿವೆ. ಬಾಬಾ ನಾನಕ್ ಪರಮಾತ್ಮನ ಓರ್ವ ಭಕ್ತದಾಸನೂ ಮಹೋನ್ನತವಾದ ಪರಮಾತ್ಮನು ತನ್ನ ಪ್ರೇಮದ ಪಾನೀಯ ಅನುಗ್ರಹಿಸಿದ ಅವನ ಭಕ್ತರಲ್ಲಿ ಓರ್ವರೂ ಆಗಿದ್ದರು. ಇಸ್ಲಾಂ ಒಂದು ದೈವಿಕ ಧರ್ಮವೆಂದು ರುಜುಪಡಿಸಲು ಅವರು ಹಿಂದುಗಳೆಡೆಯಲ್ಲಿ ಜನ್ಮ ತಾಳಿದರು. ‘ಡೇರಾ ಬಾಬಾನಾನಕ್’ ಎಂಬಲ್ಲಿ ಅವರ ಸ್ಮಾರಕವೆಂಬ ಸ್ಥಿತಿಯಲ್ಲಿರುವ ಪವಿತ್ರ ಅವಶೇಷಗಳು **‘ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದ್ ರಸೂಲಿಲ್ಲಾಹ್’** ಎಂದರೆ “ಅಲ್ಲಾಹನ ಹೊರತು ಆರಾಧನೆಗರ್ಹನು ಯಾರೂ ಇಲ್ಲ; ಮುಹಮ್ಮದ್ ಅಲ್ಲಾಹನ ಸಂದೇಶವಾಹಕ” ಎಂಬ ಇಸ್ಲಾಮಿನ ಮೂಲಭೂತ ತತ್ವಗಳಲ್ಲಿ ಅವರು ವಿಶ್ವಾಸವನ್ನು ಇಟ್ಟಿದ್ದರೆಂಬುದನ್ನು ರುಜುಪಡಿಸುತ್ತವೆ. ಮಾತ್ರವಲ್ಲ, ಫಿರೋಜ್‌ಪುರ್ ಜಿಲ್ಲೆಯಲ್ಲಿ ‘ಗುರು ಹರ್ ಸಹಾಯ್’ ಎಂಬಲ್ಲಿರುವ ಅವರ ಸ್ಮಾರಕ ವಸ್ತುಗಳಲ್ಲಿ ಪವಿತ್ರ ಖುರ್‌ಆನಿನ ಒಂದು ಪ್ರತಿಯೂ ಒಳಗೊಂಡಿದೆಯೆಂಬುದು ಸಹ ಪ್ರಸ್ತುತ ವಿಷಯಕ್ಕೆ ಸಾಕ್ಷಿಯಾಗಿದೆ. ಹೀಗಿರುವಾಗ, ನಾಮಧಾರಿಗಳಾದ ಪಂಡಿತರಿಗೆ ಗೋಪ್ಯವಾಗಿರುವ ಆ ಮರ್ಮಜ್ಞಾನವನ್ನು ಬಾಬಾನಾನಕ್ ಮನಃಶುದ್ಧಿ, ಪಾವನಶೀಲತೆ ಮತ್ತು ತೀವ್ರವಾದ ಆಧ್ಯಾತ್ಮಿಕ ಪರಿಶ್ರಮಗಳಿಂದ ಕರಗತ ಮಾಡಿದ್ದರೆಂಬ ವಿಷಯದಲ್ಲಿ ಯಾರಿಗೆ ತಾನೇ ಸಂಶಯವಿರುವುದು. ಅವರು ತಮಗೆ ದೇವಜ್ಞಾನವು ಲಭಿಸಿದೆಯೆಂದು ವಾದಿಸಿದರು. ದಿವ್ಯ ದೃಷ್ಟಾಂತಗಳನ್ನೂ ಅದ್ಭುತಗಳನ್ನೂ ತೋರಿಸಿ ‘ವೇದ’ದ ನಂತರ ದೇವಜ್ಞಾನವೋ ದಿವ್ಯ ದೃಷ್ಟಾಂತಗಳೋ ಪ್ರಕಟವಾಗಲಾರವೆಂಬ ಸಿದ್ಧಾಂತವನ್ನು ಸಂಪೂರ್ಣ ಖಂಡಿಸಿರುವರು. ನಿಸ್ಸಂದೇಹವಾಗಿಯೂ ಬಾಬಾ ಸಾಹಿಬ್ ಹಿಂದುಗಳಿಗೆ ದೇವನಿಯುಕ್ತನಾದ ಅನುಗ್ರಹವಾಗಿದ್ದರು. ಹಿಂದುಗಳ ಹೃದಯಗಳಲ್ಲಿ ಇಸ್ಲಾಮಿನ ಕುರಿತಿರುವ ದ್ವೇಷವನ್ನೂ ವಿರೋಧವನ್ನೂ ನಿವಾರಿಸಲು ಪ್ರಯತ್ನಿಸಿದ ಅಂತಿಮ ಅವತಾರ ಅವರಾಗಿದ್ದರೆಂದು ಹೇಳಬಹುದು. ಆದರೆ ದುರದೃಷ್ಟದಿಂದ ಈ

ದೇಶದ ಹಿಂದೂ ಧರ್ಮದವರು ಅವರ ಉಪದೇಶಗಳಿಂದ ಪ್ರಯೋಜನವನ್ನು ಪಡೆಯಲಿಲ್ಲ. ತದ್ವಿರುದ್ಧವಾಗಿ, ಅವರು ಇಸ್ಲಾಮನ್ನು ಏಕೆ ಹೊಗಳುತ್ತಿರುವರೆಂದು ಆಕ್ಷೇಪಿಸಿ ಹಿಂದೂ ಧರ್ಮ ಪಂಡಿತರು ಅವರನ್ನು ಉಪದ್ರವಿಸುತ್ತಿದ್ದರು. ಅವರು ಹಿಂದೂ ಧರ್ಮ ಹಾಗೂ ಇಸ್ಲಾಂ ಧರ್ಮಗಳ ಮಧ್ಯೆ ಸಮಾಧಾನ ಸಂಧಿಗಾಗಿ ಆಗಮಿಸಿದರು. ಆದರೆ ಅವರ ಉಪದೇಶಗಳಿಗೆ ಜನರು ಕಿವಿಗೊಡದದ್ದು ಖೇದಕರವಾಗಿದೆ. ಈ ದೇಶದವರು ಅವರನ್ನು ಆದರಿಸಿ ಅವರ ಬೋಧನೆಗಳನ್ನು ಕೇಳಿರುತ್ತಿದ್ದರೆ ಹಿಂದುಗಳೂ ಮುಸ್ಲಿಮರೂ ಈಗ ಒಂದಾಗಿರುತ್ತಿದ್ದರು. ಇಂತಹ ಓರ್ವ ಮಹಾತ್ಮ ಈ ಜಗತ್ತಿಗೆ ಬಂದು ಗತಿಸಿ ಹೋದರು. ಆದರೆ ಅಜ್ಞಾನಾಂಧಕಾರದಿಂದ ಕೂಡಿದ ಈ ಲೋಕವು ಅವರಿಂದ ಪ್ರಕಾಶವನ್ನು ಪಡೆಯಲಿಲ್ಲವೆಂಬುದನ್ನು ನೆನೆಸುವಾಗ ಮನೋವ್ಯಥೆಯುಂಟಾಗುತ್ತದೆ. ಹೇಗಿದ್ದರೂ, ದೇವಜ್ಞಾನ ಮತ್ತು ದಿವ್ಯವಾಣಿ ಒಮ್ಮೆಯೂ ಕೊನೆಗೊಳ್ಳುವುದಿಲ್ಲವೆಂದೂ ವರಿಷ್ಠ ದಾಸರ ಮುಖಾಂತರ ದಿವ್ಯ ದೃಷ್ಟಾಂತಗಳು ಎಲ್ಲ ಕಾಲಗಳಲ್ಲೂ ಪ್ರಕಟವಾಗುತ್ತಿರುವುವೆಂದೂ ಆ ಮಹಾತ್ಮರು ರುಜುಪಡಿಸಿದರು. ಮಾತ್ರವಲ್ಲ, ಇಸ್ಲಾಮನ್ನು ದ್ವೇಷಿಸುವುದು ದೇವನ ಕಡೆಯಿಂದಿರುವ ಪ್ರಕಾಶವನ್ನು ದ್ವೇಷಿಸುವುದಕ್ಕೆ ಸಮವೆಂದು ಸಹ ಅವರು ಸ್ಪಷ್ಟಪಡಿಸಿದರು.

## ನನ್ನ ಅನುಭವ

ಇದೇ ಪ್ರಕಾರ ನಾನು ಸಹ ಈ ವಿಷಯದಲ್ಲಿ ಅನುಭವಸ್ಥನಾಗಿರುವುದರಿಂದ ದೇವ ಬೋಧನೆ ಹಾಗೂ ದಿವ್ಯವಾಣಿ ಕೊನೆಗೊಂಡಿಲ್ಲವೆಂಬುದಕ್ಕೆ ನಾನು ಸಾಕ್ಷ್ಯ ವಹಿಸುತ್ತೇನೆ. ಪರಮಾತ್ಮನು ಪೂರ್ವ ಕಾಲಗಳಲ್ಲಿ ಮಾತನಾಡುತ್ತಿದ್ದಂತೆಯೇ ಈಗಲೂ ಮಾತನಾಡುತ್ತಾನೆ. ಪೂರ್ವ ಕಾಲಗಳಲ್ಲಿ ಅವನು ಕೇಳುತ್ತಿದ್ದಂತೆಯೇ ಈಗಲೂ ಕೇಳುತ್ತಾನೆ. ಮಾತ್ರವಲ್ಲ, ಅವನ ದಿವ್ಯ ಗುಣಗಳಲ್ಲಿ ಯಾವುದೂ ಸ್ಥಗಿತಗೊಂಡಿಲ್ಲ. 30 ವರ್ಷಗಳಿಂದ ನಾನು ಪರಮಾತ್ಮನ ಸಂಬೋಧನೆಯಿಂದ ಅನುಗ್ರಹೀತನಾಗಿದ್ದೇನೆ. ಆ ಸರ್ವಶಕ್ತನು ನೂರಾರು ದೃಷ್ಟಾಂತಗಳನ್ನು ನನ್ನ ಮುಖಾಂತರ ಪ್ರಕಟಪಡಿಸಿರುವನು. ಆ ದಿವ್ಯ ದೃಷ್ಟಾಂತಗಳನ್ನು ಸಾವಿರಗಟ್ಟಲೆ ಜನರು ಕಂಡಿರುವರು; ಅವುಗಳ ಕುರಿತಿರುವ ವಿವರಗಳು ಪುಸ್ತಕಗಳಲ್ಲೂ ವಾರ್ತಾ ಪತ್ರಿಕೆಗಳಲ್ಲೂ ಪ್ರಕಟಗೊಂಡಿರುವುವು. ಅಂತಹ ದೃಷ್ಟಾಂತಗಳಲ್ಲಿ ಒಂದನ್ನಾದರೂ

ಕಾಣಲಾರದ ಒಂದು ಜನವಿಭಾಗವೂ ಇಲ್ಲವೆಂದು ಹೇಳಬಹುದು.

ಮೇಲೆ ವಿವರಿಸಿದಂತಹ ಅಸಂಖ್ಯ ದೃಷ್ಟಾಂತಗಳಿರುವಾಗ ವೇದೋಕ್ತವೆಂದು ಆರ್ಯ ಸಮಾಜವು ಹೇಳುವ ಸಿದ್ಧಾಂತವು ಹೇಗೆ ತಾನೇ ಸ್ವೀಕಾರಾರ್ಹವಾಗುವುದು? ವೇದ ಸಂಹಿತೆಯ ಅವತೀರ್ಣದ ನಂತರ ದಿವ್ಯಬೋಧನೆ ಮತ್ತು ದಿವ್ಯವಾಣಿ ಕೊನೆಗೊಂಡಿತೆಂದೂ ತದನಂತರ ಮನುಷ್ಯ ವರ್ಗವು ಪೌರಾಣಿಕ ಕಥೆಗಳನ್ನು ಮಾತ್ರ ಆಶ್ರಯಿಸಬೇಕೆಂದೂ ಅವರು ಹೇಳುತ್ತಾರೆ. ತಮ್ಮ ಈ ವಿಶ್ವಾಸವನ್ನು ಅವಲಂಬಿಸಿಯೇ ಚತುರ್ವೇದಗಳ ಹೊರತು ದಿವ್ಯ ಗ್ರಂಥಗಳೆಂಬ ಹೆಸರಿನಲ್ಲಿ ಜಗತ್ತಿನಲ್ಲಿ ಪ್ರಚರಿತಗೊಂಡಿರುವ ಮತ್ತಿತರ ಗ್ರಂಥಗಳೆಲ್ಲ ಕೇವಲ ಮನುಷ್ಯ ನಿರ್ಮಿತಗಳೆಂದು ಅವರು ಹೇಳುತ್ತಿದ್ದಾರೆ. ಆದರೆ ಆ ಧರ್ಮಗ್ರಂಥಗಳು ವೇದ ಸಂಹಿತೆಗಿಂತ ಹೆಚ್ಚಿನ ಸಾಕ್ಷ್ಯಗಳನ್ನು ಅವುಗಳ ಸತ್ಯತೆಯನ್ನು ರುಜುಪಡಿಸಲು ಸಮರ್ಪಿಸುತ್ತವೆ. ದೈವಿಕ ಸಹಾಯ ಹಸ್ತ ಮತ್ತು ದಿವ್ಯ ದೃಷ್ಟಾಂತಗಳು ಅವುಗಳ ಸತ್ಯತೆಗೆ ಸಾಕ್ಷ್ಯಗಳಾಗಿವೆ. ಹಾಗಿರುವಾಗ ವೇದಗಳು ಮಾತ್ರ ದೈವಿಕವೆಂದೂ ಮತ್ತಿತರ ದಿವ್ಯ ಗ್ರಂಥಗಳು ದೈವಿಕವಲ್ಲವೆಂದು ಆಗುವುದು ಹೇಗೆ? ದೇವನು ಅಗೋಚರನೂ ಸೂಕ್ಷ್ಮರೂಪನೂ ಆಗಿದ್ದು, ಅವನು ತನ್ನ ಇರುವಿಕೆಯನ್ನು ವಿವಿಧ ರಾಜ್ಯಗಳಿಗೆ ತಿಳಿಸಿಕೊಡಲು ಬೇರೆ ಬೇರೆ ಜನ ವಿಭಾಗಗಳಲ್ಲಿ ವಿಭಿನ್ನ ಕಾಲಘಟ್ಟಗಳಲ್ಲಿ ಹಲವು ಪ್ರವಾದಿಗಳನ್ನು ನಿಯಮಿಸಿ, ಅವರಿಗೆ ತನ್ನ ವಚನಗಳನ್ನೂ ಪ್ರಕಟನೆಗಳನ್ನೂ ತೋರ್ಪಡಿಸುವುದು ಅತ್ಯಾವಶ್ಯಕವಾಗಿದೆ. ಹಾಗಲ್ಲದೆ ಯಾವುದಾದರೂ ಒಂದು ರಾಜ್ಯದಲ್ಲಿ ಮಾತ್ರ ತನ್ನ ಇರವನ್ನು ಪ್ರಕಟಪಡಿಸಿದರೆ ಸಾಲದೆಂದು ವಿವೇಕವು ಹೇಳುತ್ತದೆ. ಬೇಗನೆ ಸಂಶಯಗಳಿಗೂ ಶಂಕೆಗಳಿಗೂ ವಶಗತರಾಗುವ ದುರ್ಬಲ ಮನುಷ್ಯನನ್ನು ಅವಿಶ್ವಾಸದಿಂದ ವಿಮುಕ್ತಗೊಳಿಸಲಿಕ್ಕೆ ದೇವನು ಈ ರೀತಿಯ ಏರ್ಪಾಡು ಮಾಡಿರುವನು.

ಪೌರಸ್ತ್ಯ – ಪಾಶ್ಚಾತ್ಯ ಭೇದಭಾವವಿಲ್ಲದ ಸಕಲರ ಮೇಲೆಯೂ ತನ್ನ ಸೂರ್ಯನನ್ನು ಉದಯಿಸಿ ಅವರಿಗೆ ಪ್ರಕಾಶವನ್ನು ಕೊಡುವ, ಎಲ್ಲ ರಾಜ್ಯಗಳಲ್ಲೂ ಆವಶ್ಯಕ್ಕನುಗುಣವಾಗಿ ಯಥಾಕಾಲಗಳಲ್ಲಿ ಮಳೆ ಬರಿಸಿ ಅವನ್ನು ಫಲವತ್ತನ್ನಾಗಿ ಮಾಡುವ ಸರ್ವಲೋಕ ರಕ್ಷಕನಾದ ಪರಮಾತ್ಮನು ಆಧ್ಯಾತ್ಮಿಕ ವಿಷಯದಲ್ಲಿ ಸಂಕುಚಿತ ಮನೋಭಾವಿಯೂ ಜಿಪುಣನನೂ ಆಗಿರುವನೆಂದು

ಭಾವಿಸುವ ರೀತಿಯಲ್ಲಿ ಅವನು ಯಾವಾಗಲೂ ಒಂದೇ ರಾಜ್ಯವನ್ನು, ಒಂದೇ ಸಮುದಾಯವನ್ನು, ಒಂದೇ ಭಾಷೆಯನ್ನು ಮಾತ್ರ ಪ್ರೀತಿಸಿ, ತನ್ನ ಆಧ್ಯಾತ್ಮಿಕ ಅನುಗ್ರಹವನ್ನು ಪರಿಮಿತಗೊಳಿಸಿರುವನೆಂದು ಹೇಳುವುದು ವಿವೇಕ ಯೋಗ್ಯವಾದುದಲ್ಲ. ಮನುಷ್ಯರು ಅವರ ವಿಭಿನ್ನ ಭಾಷೆಗಳಲ್ಲಿ ಮಾಡುವ ಪ್ರಾರ್ಥನೆಗಳನ್ನು ಕೇಳುವುದರಲ್ಲಿ ಅತೃಪ್ತಿಯನ್ನು ತೋರಿಸದ ದೇವನು ವೈದಿಕ ಸಂಸ್ಕೃತದ ಹೊರತು ಮತ್ತ್ಯಾವುದೇ ಭಾಷೆಯಲ್ಲಿ ದಿವ್ಯಬೋಧನೆ ನೀಡುವುದರಲ್ಲಿ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸುವನೆಂಬ ಸಿದ್ಧಾಂತದಲ್ಲಿ ಯಾವ ರೀತಿಯ ವಿವೇಕ ಅಥವಾ ಯಾವ ವಿಧದ ತತ್ವ ಅಡಕವಾಗಿದೆಂಬುದು ನನಗೆ ಅರ್ಥವಾಗುವುದಿಲ್ಲ. ಈ ತತ್ವವು ಒಂದು ಬಿಡಿಸಲಾರದ ಒಗಟಿನಂತಿದೆ.

ವಿವೇಕಕ್ಕೆ ವಿರುದ್ಧವಾದದ್ದು ಮಾತ್ರವಲ್ಲ, ಪರಿಶುದ್ಧನಾದ ದೇವನನ್ನು ಲೋಭಿ ಮತ್ತು ಪಕ್ಷಪಾತಿಯೆಂಬಂತೆ ಚಿತ್ರಿಸುವ ಈ ಪಾಠವು ಯಥಾರ್ಥವಾಗಿ ವೇದೋಕ್ತವೆಂದು ನಾನು ನಂಬುವುದಿಲ್ಲ. ವಾಸ್ತವಿಕವಾಗಿ, ಯಾವುದಾದರೊಂದು ದೇವೋಕ್ತ ಗ್ರಂಥವು ಅವತೀರ್ಣವಾಗಿ ಹಲವಾರು ಸಂವತ್ಸರಗಳು ಕಳೆಯುವಾಗ ಅಶ್ರದ್ಧೆಯಿಂದಲೋ ಸ್ವಾರ್ಥದಿಂದಲೋ, ತಿಳಿದೋ ತಿಳಿಯದೆಯೋ ಆ ಗ್ರಂಥಾನುಯಾಯಿಗಳಲ್ಲಿ ಕೆಲವರು ತಮ್ಮ ವ್ಯಾಖ್ಯಾನವನ್ನು ಆ ಗ್ರಂಥದ ಮೂಲ ಪಾಠಗಳೊಂದಿಗೆ ಸೇರಿಸುತ್ತಾರೆ. ಹೀಗೆ ವ್ಯಾಖ್ಯಾನಿಸುವವರು ವಿವಿಧ ಅಭಿಪ್ರಾಯಗಳನ್ನು ಹೊಂದಿರುವವರಾದುದರಿಂದ ಒಂದು ಧರ್ಮದಿಂದ ನೂರಾರು ಧರ್ಮಗಳು ಜನ್ಮ ತಾಳುವುವು.

## ಸಂಕುಚಿತ ವಿಶ್ವಾಸಗಳು

ದಿವ್ಯವಾಣಿ ಯಾವಾಗಲೂ ಆರ್ಯರಿಗೂ ಆರ್ಯಾವರ್ತದ ಸೀಮೆಯೊಳಗೂ ಮಾತ್ರ ಪರಿಮಿತವೆಂದೂ ದೇವ ವಚನವು ಸಂಸ್ಕೃತ ಭಾಷೆಯ ಮೂಲಕ ಮಾತ್ರವೇ ಅವತೀರ್ಣವಾದುದೆಂದೂ ದೈವಿಕ ಭಾಷೆ ಅದು ಮಾತ್ರ ಆಗಿದೆಯೆಂದೂ ಆರ್ಯ ಸಮಾಜದವರು ಭಾವಿಸುವ ರೀತಿಯಲ್ಲಿ ಯಹೂದಿಯರು ಸಹ ತಮ್ಮ ವರ್ಗ, ಧರ್ಮಗ್ರಂಥ ಮತ್ತು ಗ್ರಂಥ ಭಾಷೆಯ ಕುರಿತು ಭಾವಿಸುತ್ತಾರೆ. ದೇವ ಭಾಷೆ ಹೀಬ್ರೂ ಆಗಿದೆಯೆಂದೂ ದಿವ್ಯವಾಣಿ ಇಸ್ರಾಈಲ್ ವರ್ಗದವರೆಡೆಯಲ್ಲೂ ಅವರ

ರಾಜ್ಯದ ಸೀಮೆಯೊಳಗೂ ಮಾತ್ರ ಪರಿಮಿತಗೊಂಡಿರುವ ರೀತಿಯಲ್ಲಿ ತಾವು ದೇವನ ವರಿಷ್ಠ ಸಮುದಾಯವೆಂದು ಯಹೂದ್ಯರು ನಂಬುತ್ತಾರೆ. ಯಹೂದಿ ಜಾತಿಯವನೂ ಹೀಬ್ರೂ ಭಾಷೆಯವನೂ ಅಲ್ಲದ ಓರ್ವನು ಪ್ರವಾದಿಯೆಂದು ವಾದಿಸುವನಾದರೆ ಆತನನ್ನು ಅವರು ಮಿಥ್ಯಾವಾದಿಯೆಂದು ಭಾವಿಸುತ್ತಾರೆ. ಈ ಎರಡೂ ಜಾತಿಯವರು ತಮ್ಮ ವಿಶ್ವಾಸದಲ್ಲಿ ಒಂದೇ ರೀತಿಯ ಅಭಿಪ್ರಾಯ ಹೊಂದಿರುವುದು ಆಶ್ಚರ್ಯಕರವಲ್ಲವೇ? ಇವರ ಹಾಗೆಯೇ ಬೇರೆ ಕೆಲವು ಧರ್ಮ ವಿಭಾಗದವರು ಇಂತಹ ಅಭಿಪ್ರಾಯಗಳನ್ನೇ ಹೊಂದಿರುವುದನ್ನು ಕಾಣಬಹುದು. ಉದಾಹರಣೆಗೆ, ತಮ್ಮ ಧರ್ಮ ವೇದಗಳಿಗಿಂತ ಲಕ್ಷೋಪಲಕ್ಷ ವರ್ಷಗಳಿಗೆ ಮೊದಲೇ ಇದ್ದುದೆಂದು ವಾದಿಸುವ ಪಾರ್ಸಿಗಳು (ಜೊರಾಸ್ಟ್ರಿಯನ್ನರು) ಈ ಸಂಕುಚಿತ ಅಭಿಪ್ರಾಯವನ್ನೇ ಹೊಂದಿರುವರು. ದಿವ್ಯವಾಣಿ ಮತ್ತು ದೈವಿಕಜ್ಞಾನ ತಮ್ಮ ರಾಜ್ಯದೊಳಗೂ ತಮ್ಮ ಜಾತಿಯವರೊಳಗೂ ತಮ್ಮ ಗ್ರಂಥ ಭಾಷೆಯಲ್ಲೂ ಮಾತ್ರವೇ ಇವೆ ಎಂಬ ಈ ವಿಶ್ವಾಸವು ಪಕ್ಷಪಾತ ಮನೋಭಾವನೆ ಮತ್ತು ಅಜ್ಞಾನದಿಂದಾಗಿ ಉಂಟಾದದ್ದೆಂದು ನನಗೆ ತೋರುತ್ತದೆ. ಒಂದು ಜಾತಿಯವರಿಗೆ ಇತರ ಜಾತಿಯವರ ಕುರಿತಾಗಲೀ ಒಂದು ರಾಜ್ಯದವರಿಗೆ ಇತರ ರಾಜ್ಯದವರ ಕುರಿತಾಗಲೀ ಯಾವುದೇ ವಿವರ ಲಭಿಸಲು ದಾರಿಯಿಲ್ಲದ ಅನೇಕ ಯುಗಗಳು ಈ ಲೋಕದಲ್ಲಿ ಹಿಂದೆ ಕಳೆದಿವೆ. ಆದ ಕಾರಣ, ಆ ಕಾಲಗಳಲ್ಲಿ ದೇವ ನಿಯುಕ್ತನಾದ ಓರ್ವ ಪ್ರವಾದಿಯನ್ನೋ ದಿವ್ಯ ಗ್ರಂಥವನ್ನೋ ಪಡೆದಿದ್ದ ಒಂದು ಜಾತಿಯವರು ಅಥವಾ ಒಂದು ರಾಜ್ಯದವರು ತಮ್ಮ ಅಜ್ಞಾನ ನಿಮಿತ್ತ, ಪರಮಾತ್ಮನ ಕಡೆಯಿಂದ ಮಾರ್ಗದರ್ಶನ ಸಿದ್ಧಿಸಿದ್ದು ತಮಗೆ ಮಾತ್ರವೆಂದೂ ತಮ್ಮ ಜಾತಿಯವರಿಗೆ ಅಥವಾ ತಮ್ಮ ರಾಜ್ಯದವರಿಗೆ ಮಾತ್ರ ದೈವಿಕ ಗ್ರಂಥ ಲಭಿಸಿದ್ದೆಂದೂ ಹೊರಗಿನವರಲ್ಲಿ ಯಾರಿಗೂ ಅದರ ಭಾಗ್ಯವಿರಲಿಲ್ಲವೆಂದೂ ಭಾವಿಸಿದ್ದರು.

ಈ ವಿಶ್ವಾಸವು ಲೋಕದಲ್ಲಿ ತುಂಬಾ ನಾಶಗಳಿಗೆ ಕಾರಣವಾಯಿತು. ಯಥಾರ್ಥದಲ್ಲಿ, ಇತರ ಧರ್ಮ ಗ್ರಂಥಗಳ ಮತ್ತು ಅನ್ಯಧರ್ಮ ಪ್ರವಾದಿಗಳ ಕುರಿತು ಪಕ್ಷಪಾತ ಮನೋಭಾವದಿಂದ ಕೂಡಿದ ಈ ವಿಶ್ವಾಸವು ವಿವಿಧ ಸಮುದಾಯಗಳೆಡೆಯಲ್ಲಿ ಹೆಚ್ಚುತ್ತಾ ಬಂದ ವರ್ಗೀಯ ಮತ್ತು ಧಾರ್ಮಿಕ ವೈರತ್ವಕ್ಕೂ ವಿದ್ವೇಷಕ್ಕೂ ಕಾರಣವಾಯಿತು. ಒಂದು ದೀರ್ಘ ಕಾಲದವರೆಗೆ ಒಂದು ಜನತೆ ಇನ್ನೊಂದು ಜನತೆಯ ಕುರಿತಾಗಲೀ ಒಂದು ರಾಜ್ಯದವರು

ಇನ್ನೊಂದು ರಾಜ್ಯದವರ ಕುರಿತಾಗಲೀ ತಿಳಿಯಲು ಸಾಧ್ಯವಾಗದ ರೀತಿಯಲ್ಲಿ ಬೇರ್ಪಟ್ಟು ಜೀವಿಸಿದ್ದರು. ಇತ್ತಕಡೆಯಲ್ಲಿ ಒಂದು ಕಾಲದಲ್ಲಿ ಆರ್ಯಾವರ್ತದ ಪಂಡಿತರು ಹಿಮಾಲಯದ ಆಚೆಗೆ ಜನವಾಸವೇ ಇಲ್ಲವೆಂದು ನಂಬಿದ್ದರು. ಆದರೆ ವಿವಿಧ ಜಾತಿಗಳೆಡೆಯಲ್ಲಿ ಮತ್ತು ವಿವಿಧ ರಾಜ್ಯಗಳೆಡೆಯಲ್ಲಿದ್ದ ಆ ಪರದೆ ಸರಿದು ಮನುಷ್ಯರ ನಾಗರಿಕತೆಯ ಪರಿಧಿಯು ವಿಸ್ತೃತಗೊಂಡಿದ್ದರಿಂದ ಅವರಿಗೆ ಭೂಮಿಯ ಜನವಾಸದ ಕುರಿತಿರುವ ತಿಳುವಳಿಕೆ ವರ್ಧಿಸಿತು. ಅಷ್ಟರೊಳಗೆ ಪ್ರತಿಯೊಂದು ಸಮುದಾಯದವರು ತಮ್ಮ ತಮ್ಮ ವೇದಗ್ರಂಥಗಳ, ಋಷಿವರ್ಯರ ಮತ್ತು ಪ್ರವಾದಿಗಳ ಕುರಿತು ಸ್ವಯಂ ಹೃದಯದಲ್ಲಿ ರೂಪಕೊಟ್ಟು ತಮ್ಮ ವಿಶ್ವಾಸಾಧಾರವಾಗಿ ಸ್ವೀಕರಿಸಿದ ವಿಚಾರಗಳು ಕಲ್ಲಿನ ಮೇಲೆ ಕೊರೆದ ನಕ್ಷೆಯಂತೆ ಅವರ ಹೃದಯದಲ್ಲಿ ಅಳಿಸಲಾಗದ ರೀತಿಯಲ್ಲಿ ನೆಲೆನಿಂತ ಕಾರಣ ಪ್ರತಿಯೊಂದು ಜನಾಂಗದವರೂ ದೇವನ ಆಡಳಿತ ಕೇಂದ್ರ ತಮ್ಮ ರಾಜ್ಯದಲ್ಲಿ ಮಾತ್ರ ಇರುವುದೆಂದು ಭಾವಿಸಿದ್ದರು. ಆ ಕಾಲದಲ್ಲಿ ಮನುಷ್ಯರ ಹಿಂಸಾ ಪ್ರವೃತ್ತಿಯು ಅಧಿಕವಾಗಿತ್ತು. ಪುರಾತನ ವಿಶ್ವಾಸಾಚಾರಗಳಿಗೆ ಎದುರು ಹೇಳುವವರಿಗೆ ಖಡ್ಗದಿಂದ ಉತ್ತರಿಸುವುದು ರೂಢಿಯಾಗಿತ್ತು. ಹಾಗಿರುವಾಗ ವಿವಿಧ ಜಾತಿಯವರ ಈ ಸ್ವಯಂ ಶ್ರೇಷ್ಠತಾವಾದದ ಕೋಲಾಹಲಗಳನ್ನು ಶಾಂತಪಡಿಸಿ ಅವರೆಡೆಯಲ್ಲಿ ಸಮಾಧಾನವನ್ನು ಸೃಷ್ಟಿಸಲು ಯಾರಿಗೆ ತಾನೆ ಧೈರ್ಯವಿತ್ತು?

ಆದರೆ ಶ್ರೀ ಗೌತಮಬುದ್ಧ ಹಾಗೆ ಒಂದು ಸಮಾಧಾನವನ್ನುಂಟುಮಾಡಲು ಪ್ರಯತ್ನಿಸಿದ್ದರು. ಸರ್ವವೂ ವೇದದಲ್ಲಿ ಅಡಕವಾಗಿರುವುದೆಂದೂ ಆದಿಯ ಹಾಗೂ ಅಂತಿಮ ದೈವಿಕ ಪ್ರಭೋದನೆ ಅದೇ ಆಗಿದೆಯೆಂದೂ ಇರುವ ಸಿದ್ಧಾಂತವನ್ನು ಅವರು ಅನುಕೂಲಿಸಿರಲಿಲ್ಲ. ದಿವ್ಯವಾಣಿಯೂ ದಿವ್ಯಬೋಧನೆಯೂ ಯಾವುದಾದರೊಂದು ಜನ ವಿಭಾಗದೆಡೆಯಲ್ಲೋ ಒಂದು ರಾಜ್ಯದ ಪರಿಧಿಯೊಳಗೋ ಒಂದು ಭಾಷೆಯಲ್ಲೋ ಮಾತ್ರವಿರುವುದೆಂಬ ವಿಶ್ವಾಸವನ್ನು ಅವರು ಒಪ್ಪಲಿಲ್ಲ. ವೇದದಲ್ಲಿ ಮಾತ್ರ ಎಲ್ಲವೂ ಇದೆಯೆಂಬ ವಾದವನ್ನಾಗಲೀ ಈ ರಾಜ್ಯ, ಈ ಸಂಸ್ಕೃತ ಭಾಷೆ ಅಥವಾ ಈ ಬ್ರಾಹ್ಮಣ ಜಾತಿ ಮಾತ್ರ ದೇವನ ಆಸ್ಥಾನದಲ್ಲಿ ಸ್ವೀಕೃತವೆಂಬ ವಾದವನ್ನಾಗಲೀ ಅವು ಅಂಗೀಕರಿಸಿರಲಿಲ್ಲ. ಅವರ ಅಭಿಪ್ರಾಯ ಭಿನ್ನತೆಯ ಕಾರಣದಿಂದ ಅವರು ಬಹಳ ಕ್ಲೇಶಗಳನ್ನೂ ದುಃಖಗಳನ್ನೂ ಅನುಭವಿಸಬೇಕಾಯಿತು. ಅವರು ನಾಸ್ತಿಕ

ಮತ್ತು ನಿರೀಶ್ವರವಾದಿಯೆಂದು ಆರೋಪಿಸಲ್ಪಟ್ಟರು. ಆಧುನಿಕ ಕಾಲದಲ್ಲಿ ಮಹಾತ್ಮ ಯೇಸುಕ್ರಿಸ್ತರ ದೇವತ್ವವನ್ನು ಅಂಗೀಕರಿಸದ, ದೇವನನ್ನು ಶಿಲುಬೆಗೇರಿಸಲು ಸಾಧ್ಯವೆಂದು ಸಮ್ಮತಿಸಲು ಸಿದ್ಧರಿಲ್ಲದ, ಯುರೋಪು ಮತ್ತು ಅಮೇರಿಕಾದ ಚಿಂತನಾಶೀಲರಾದ ಅನ್ವೇಷಣಾ ಬುದ್ಧಿಯವರೆಲ್ಲರೂ ಪಾದ್ರಿಗಳ ದೃಷ್ಟಿಯಲ್ಲಿ ನಿರೀಶ್ವರರೂ ನಾಸ್ತಿಕರೂ ಆದ ಹಾಗೆಯೇ ಶ್ರೀ ಬುದ್ಧ ಸಹ ಅವರ ದೃಷ್ಟಿಯಲ್ಲಿ ನಾಸ್ತಿಕರಾದರು.

ದುಷ್ಟ ಬುದ್ಧಿಗಳಾದ ಶತ್ರುಗಳು ಸಾಮಾನ್ಯವಾಗಿ ಮಾಡುವಂತೆಯೇ ಶ್ರೀ ಬುದ್ಧರನ್ನು ಸಹ ಅವರ ವೈರಿಗಳು ತಮ್ಮ ಮಿಥ್ಯಾರೋಪಗಳಿಗೆ ಗುರಿಪಡಿಸಿ ಜನರು ಅವರನ್ನು ಹೀನೈಸುವಂತೆ ಮಾಡಿದರು. ಅವರಿಗೆ ಅಪಕೀರ್ತಿಯನ್ನು ಉಂಟುಮಾಡಿ ಕಡೆಗೆ ಆ ಅಪಪ್ರಚಾರಗಳ ಕಾರಣದಿಂದ ಶ್ರೀ ಬುದ್ಧರಿಗೆ ತನ್ನ ಜನ್ಮ ಭೂಮಿಯಾದ ಆರ್ಯಾವರ್ತವನ್ನು ತ್ಯಜಿಸಬೇಕಾಯಿತು. ಹಿಂದುಗಳು ಬುದ್ಧಧರ್ಮವನ್ನೂ ಅದರ ವಿಜಯವನ್ನೂ ಅತೃಪ್ತಿ ಮತ್ತು ಅಗೌರವ ಭಾವದಿಂದ ವೀಕ್ಷಿಸುತ್ತಾರೆ. ಪ್ರವಾದಿಯು ಸ್ವದೇಶದಲ್ಲಿ ಗೌರವಿಸಲ್ಪಡುವುದಿಲ್ಲವೆಂಬ ಮಹಾತ್ಮ ಯೇಸುಕ್ರಿಸ್ತರ ವಚನಕ್ಕೆ ಅನುರೂಪವಾಗಿ ಶ್ರೀ ಬುದ್ಧರು ಅನ್ಯರಾಜ್ಯಗಳಿಗೆ ಹೋದನಂತರ ಅವರಿಗೆ ಮಹಾವಿಜಯವು ಲಭಿಸಿತು. ಇಂದು ಲೋಕದಲ್ಲಿರುವ ಧರ್ಮಗಳ ಪೈಕಿ ಮೂರನೆಯ ಸ್ಥಾನ ಬುದ್ಧ ಧರ್ಮಕ್ಕಿದೆಯೆಂದು ಹೇಳಲ್ಪಡುತ್ತದೆ. ಈ ಧರ್ಮಾನುಯಾಯಿಗಳು ದಕ್ಷಿಣ ರಶ್ಯಾದಲ್ಲಿಯೂ ಅಮೇರಿಕಾದಲ್ಲಿಯೂ ಇರುವವರಾದರೂ ಅವರ ಸಂಖ್ಯಾ ಬಲವನ್ನು ನೋಡಿದರೆ ಅದರ ಕೇಂದ್ರಗಳು ಚೀನ ಮತ್ತು ಜಪಾನ್ ದೇಶಗಳಾಗಿವೆ.

## ಅಸಹಿಷ್ಣುತೆಯ ಆರಂಭ

ಮುಖ್ಯ ವಿಷಯದ ಕುರಿತು ಪುನಃ ಗಮನಿಸೋಣ. ಒಂದು ಧರ್ಮಾನುಯಾಯಿಗಳಿಗೆ ಇತರ ರಾಜ್ಯಗಳಲ್ಲಿರುವ ಧರ್ಮಗಳ ಕುರಿತು ಯಾವುದೇ ವಿವರ ತಿಳಿಯದ ಕಾಲಗಳಲ್ಲಿ ಪ್ರತಿಯೊಂದು ಸಮುದಾಯದವರು ತಂತಮ್ಮ ಧರ್ಮವನ್ನೂ ಧರ್ಮ ಗ್ರಂಥವನ್ನೂ ಮಾತ್ರ ಸತ್ಯ ಹಾಗೂ ಜ್ಞಾನದ ಭಂಡಾರವೆಂದು ಭಾವಿಸಿದ್ದರು. ಅನಂತರ ವಿವಿಧ ರಾಜ್ಯದವರು ಅನ್ಯೋನ್ಯ

ಪರಿಚಯಗೊಳ್ಳಲಿಕ್ಕೂ ಒಂದು ರಾಜ್ಯದವರು ಮತ್ತೊಂದು ರಾಜ್ಯದವರ ಧರ್ಮ ವಿಶ್ವಾಸಗಳ ಕುರಿತು ತಿಳಿಯಲಿಕ್ಕೂ ಪ್ರಾರಂಭಿಸಿದರು. ಆದರೆ ಅವರಿಗೆ ಒಬ್ಬರಿಗಿನ್ನೊಬ್ಬರ ಧರ್ಮ ವಿಶ್ವಾಸಗಳನ್ನು ಆದರಿಸಲು ಕಷ್ಟವಾಯಿತು. ಏಕೆಂದರೆ ಪ್ರತಿಯೊಬ್ಬರೂ ತಂತಮ್ಮ ಧರ್ಮಗಳಿಗೆ ಅತಿಶಯೋಕ್ತಿಗಳಿಂದ ಕೂಡಿದ ವೈಶಿಷ್ಟ್ಯಗಳನ್ನೂ ಶ್ರೇಷ್ಠತೆಗಳನ್ನೂ ಕಲ್ಪಿಸಿ, ಅವುಗಳನ್ನು ಆ ಧರ್ಮದಿಂದ ಬೇರ್ಪಡಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಅವುಗಳಿಗೆ ಅವರು ಹಚ್ಚಿಕೊಂಡಿದ್ದರು. ತತ್ಪರಿಣಾಮವಾಗಿ ಪ್ರತಿಯೊಂದು ಧರ್ಮಸ್ಥರು ಇತರರ ಧರ್ಮವನ್ನು ಖಂಡಿಸಲು ಉದ್ಯುಕ್ತರಾದರು. ಉದಾಹರಣೆಗಾಗಿ, ಪಾರ್ಸೀ ಧರ್ಮದವರು ತಮ್ಮ ಧರ್ಮಕ್ಕೆ ತುಲ್ಯವಾದ ಇನ್ನೊಂದು ಧರ್ಮವಿಲ್ಲವೆಂದೂ ಪ್ರವಾದಿತ್ವವು ತಮ್ಮ ವರ್ಗಕ್ಕೆ ಮಾತ್ರ ಸೀಮಿತವಾಗಿದೆಯೆಂದೂ ವಾದಿಸಿದರು. ಅವರ ಧರ್ಮದ ಚರಿತ್ರೆಯ ಪ್ರಾಚೀನತೆ ಮತ್ತು ದೈರ್ಘ್ಯದ ವಿವರಣೆಯ ಮುಂದೆ ವೇದದ ಚರಿತ್ರೆಯನ್ನು ನಿರೂಪಿಸುವವರು ಲಜ್ಜಿತರಾಗಬೇಕಾದೀತು.

ಹೀಬ್ರೂ ಜಾತಿಯವರು ತಮ್ಮ ಶ್ರೇಷ್ಠತಾವಾದವನ್ನು ತುತ್ತ ತುದಿಗೇರಿಸಿದರು. ದೇವನ ಆಸ್ಥಾನ ಸದಾಕಾಲ ತಮ್ಮ ಸ್ವದೇಶವಾದ ಸಿರಿಯದಲ್ಲಿ ಇರುವುದೆಂದೂ ಅವರು ವಾದಿಸಿದರು. ಆಧ್ಯಾತ್ಮಿಕ ಸುಧಾರಣೆಗಾಗಿ ದೇವ ನಿಯುಕ್ತರಾಗುವ ಪ್ರವಾದಿಗಳು ತಮ್ಮ ಗೋತ್ರದಿಂದ ಮಾತ್ರವೇ ಆರಿಸಲ್ಪಡುವವರಾಗಿದ್ದಾರೆಂದೂ ಈ ಮಾರ್ಗದರ್ಶನ ಇಸ್ರಾಈಲ್ ಗೋತ್ರದ ಹೊರಗೆಲ್ಲೂ ಇಲ್ಲದೆ ಅದು ತಮಗೆ ಮಾತ್ರವುಳ್ಳದ್ದೆಂದೂ ಅವರು ನಂಬುತ್ತಾರೆ. ದಿವ್ಯವಾಣಿ ಮತ್ತು ದೈವಿಕ ಬೋಧನೆಯ ಅನುಗ್ರಹವೂ ತಮ್ಮ ಗೋತ್ರಕ್ಕೆ ಮಾತ್ರವಿರುವ ಒಂದು ವರವೆಂದೂ ಹೊರಗಿನಿಂದ ಯಾರಾದರೂ ಈ ಅನುಗ್ರಹವುಂಟಾಗಿದೆಯೆಂದು ವಾದಿಸುವನಾದರೆ ಅವನು ಕೇವಲ ಒಬ್ಬ ಮಿಥ್ಯವಾದಿ ಎಂಬುದಾಗಿದೆ ಅವರ ವಿಶ್ವಾಸ.

ಇದೇ ರೀತಿಯ ವಿಶ್ವಾಸಗಳು ಆರ್ಯಾವರ್ತದ ಜನತೆಗಳಲ್ಲೂ ಪ್ರಬಲಗೊಂಡಿವೆ. ಇವರ ವಿಶ್ವಾಸ ಪ್ರಕಾರ ಪರಮೇಶ್ವರನು ಇವರ ರಾಜ್ಯದ ಕಾರ್ಯಗಳನ್ನು ಮಾತ್ರ ನೋಡುವ ಒಬ್ಬ ರಾಜನಾಗಿದ್ದಾನೆ – ಇತರ ರಾಜ್ಯಗಳ ಕುರಿತು ಏನೂ ಅರಿಯದ ಒಬ್ಬ ರಾಜ! ಆದಿ ಕಾಲದಿಂದಲೂ ಆರ್ಯಾವರ್ತದ ಕಾಲಾವಸ್ಥೆಗಳೂ ಪರಿಸ್ಥಿತಿಗಳೂ ಅವನಿಗೆ ಹಿಡಿಸಿವೆ! ಆದ್ದರಿಂದ ತಾನು ಸೃಷ್ಟಿಸಿದ

ನಂತರ ಮರೆತು ಬಿಟ್ಟಿರುವ ಇತರ ರಾಜ್ಯಗಳ ಸ್ಥಿತಿಗತಿಗಳನ್ನು ಅರಿಯಲು ಅವರನ್ನು ಒಮ್ಮೆಯಾದರೂ ಸಂದರ್ಶಿಸಲು ಅವನಿಗೆ ಇಚ್ಛೆಯುಂಟಾಗಲಿಲ್ಲ. ಇಂತಹ ವಿಶ್ವಾಸಗಳು ಯಾವುದೇ ಪುರಾವೆ ಅಥವಾ ಸಾಕ್ಷ್ಯಾಧಾರವಿಲ್ಲದೆ ರೂಢಿಯಲ್ಲಿವೆ.

## ಪ್ರವಾದಿನಿಂದೆ ವಿಷ

ಸಹೃದಯರೇ, ಈ ವಿಶ್ವಾಸಗಳು ಮನುಷ್ಯನ ಸ್ವಭಾವಕ್ಕೂ ವಿವೇಕಕ್ಕೂ ತಕ್ಕವೋ ಎಂದೂ ಮನಸ್ಸಾಕ್ಷಿ ಅವನ್ನು ಸಮ್ಮತಿಸುತ್ತದೋ ಎಂದೂ ನೀವು ಆಲೋಚಿಸಿರಿ. ಒಂದು ಕಡೆಯಲ್ಲಿ ಪರಮಾತ್ಮನನ್ನು ಸರ್ವ ಲೋಕಾಧಿನಾಥನೆಂದು ನಂಬಿ, ಅದೇ ನಾಲಗೆಯಿಂದ ಇನ್ನೊಂದು ಕಡೆ ಆ ಸರ್ವದಾತನು ಜಗತ್ತಿನ ಹೆಚ್ಚಿನ ಭಾಗಕ್ಕೆ ರಕ್ಷಣೆಯನ್ನೀಯುವುದಿಲ್ಲವೆಂದೂ ಅವನ ದಯಾದೃಷ್ಟಿ ಒಂದು ನಿರ್ದಿಷ್ಟ ಜಾತಿಗೋ ನಿರ್ದಿಷ್ಟ ರಾಜ್ಯಕ್ಕೋ ಮಾತ್ರವೆಂದೂ ಹೇಳುವುದರಲ್ಲಿ ಏನು ವಿವೇಕವಿದೆಯೆಂದು ನನಗೆ ತಿಳಿಯುವುದಿಲ್ಲ. ನೀತಿಪೂರ್ವಕವಾಗಿ ಅವಲೋಕನ ಮಾಡಿದ ಪಕ್ಷದಲ್ಲಿ, ಪರಮಾತ್ಮನು ತನ್ನ ಭೌತಿಕಾನುಗ್ರಹಗಳನ್ನು ವಿತರಣೆ ಮಾಡಿದ ಕಾರ್ಯದಲ್ಲಿ ಹೀಗೆ ಪಕ್ಷಪಾತ ಕಾಣಿಸಿರುವ ಒಂದು ಉದಾಹರಣೆಯನ್ನು ನಿಮಗೆ ಕಾಣಲು ಸಾಧ್ಯವಿಲ್ಲ. ಹೀಗಿರುವಾಗ, ಅವನ ಆಧ್ಯಾತ್ಮಿಕ ಅನುಗ್ರಹ ವಿತರಣೆಯಲ್ಲಿ, ಅವನಲ್ಲಿ ಪಕ್ಷಪಾತವನ್ನು ಕಾಣುವುದು ಹೇಗೆ? ಸೂಕ್ಷ್ಮವಾಗಿ ಆಲೋಚಿಸುವುದಾದರೆ, ಪ್ರತಿಯೊಂದು ಸಂಗತಿಯ ಗುಣವಾಗಲೀ ದೋಷವಾಗಲೀ ಅದರ ಕಾರ್ಯಫಲದಿಂದ ತಿಳಿಯಬಹುದಾಗಿದೆ. ಪ್ರತಿಯೊಂದು ವಿಭಾಗದ ಕೋಟಿಗಟ್ಟಲೆ ಜನರ ಭಕ್ತ್ಯಾದರಗಳಿಗೆ ಪಾತ್ರರಾದ ಪುಣ್ಯ ಪುರುಷರನ್ನು ಅಪಮಾನಿಸುವುದರ ಮತ್ತು ಆಕ್ಷೇಪಿಸುವುದರ ಪರಿಣಾಮವೇನೆಂದೂ ಅದರ ಪರ್ಯವಸಾನವೇನೆಂದೂ ನಾನು ನಿಮ್ಮೊಡನೆ ಹೇಳುವ ಅಗತ್ಯವಿಲ್ಲ. ಕಾರಣವೇನೆಂದರೆ, ಇಂತಹ ಆಕ್ಷೇಪಕರವಾದ ಹೀನೈಸುವಿಕೆಯ ದೋಷಫಲವನ್ನು ಹೆಚ್ಚು ಕಡಿಮೆ ಅನುಭವಿಸಿರದ ಒಂದು ಜನ ವಿಭಾಗವೂ ಇರಲಿಕ್ಕಿಲ್ಲ.

ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನೂ ಮಹಾತ್ಮರನ್ನೂ ನಿಂದಿಸುವುದೂ ಆಕ್ಷೇಪಿಸುವುದೂ

ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟುಮಾಡಿ ಧಾರ್ಮಿಕವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯನ್ನು ಉಂಟುಮಾಡುವ ಒಂದು ಭಯಂಕರ ವಿಷವೆಂದು ದೀರ್ಘಕಾಲದ ಅನುಭವಗಳೂ ವಿವಿಧ ಸಂದರ್ಭಗಳಲ್ಲಿ ನಡೆದ ಪರೀಕ್ಷಾ ಸಂಭವಗಳೂ ನಮಗೆ ರುಜುಪಡಿಸಿರುತ್ತವೆ. ಅನ್ಯೋನ್ಯ ಧರ್ಮಾಚಾರ್ಯರನ್ನು ಅವಹೇಳಿಸುವ ಮತ್ತು ಕುಂದುಕೊರತೆ ಎಣಿಸುವ ದೇಶವಾಸಿಗಳಿಗೆ ಸಮಾಧಾನದ ಜೀವಿತ ಸಾಧ್ಯವಲ್ಲ. ಒಂದು ಸಮುದಾಯವು ಮತ್ತೊಂದು ಸಮುದಾಯದ ಪ್ರವಾದಿಗಳನ್ನು ಅಥವಾ ಎರಡೂ ಸಮುದಾಯಗಳು ಅನ್ಯೋನ್ಯ ಪ್ರವಾದಿಗಳನ್ನೂ ಋಷಿಗಳನ್ನು ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ನೈಜ ಐಕ್ಯ ಮತ್ತು ಮೈತ್ರಿ ಏರ್ಪಡಲಾರದು. ತಾನು ನಂಬಿ ಆದರಿಸುವ ಪ್ರವಾದಿ ಅಥವಾ ಧರ್ಮಾಚಾರ್ಯರ ಕುರಿತು ಅವಹೇಳನಕಾರಿ ಮಾತು ಕೇಳುವಾಗ ಯಾರಿಗೆ ತಾನೆ ರೋಷವುಂಟಾಗಲಾರದು? ಮುಸ್ಲಿಮರು ತಮ್ಮ ಪೈಗಂಬರರನ್ನು[ಸ] ದೇವನೆಂದೋ ದೇವಪುತ್ರನೆಂದೋ ಭಾವಿಸುವುದಿಲ್ಲವಾದರೂ, ಅವರು ಆ ಪುಣ್ಯ ಪ್ರವಾದಿಯನ್ನು ಭೂಜಾತರಾದ ಸಕಲರಿಗಿಂತ ಶ್ರೇಷ್ಠರೆಂದು ನಂಬುವ ಕಾರಣ ಆ ಪರಿಶುದ್ಧ ಪ್ರವಾದಿಯ[ಸ] ಬಗ್ಗೆ ಮಾತನಾಡುವಾಗ ಉಪಯೋಗಿಸುವ ಪದಗಳು ಸಭ್ಯತೆ ಮತ್ತು ಗೌರವಾದರಗಳಿಂದ ಕೂಡಿರದ ಪಕ್ಷದಲ್ಲಿ ಒಬ್ಬ ಯಥಾರ್ಥ ಮುಸ್ಲಿಮನೊಡನೆ ಸ್ನೇಹಬಂಧವನ್ನು ಸ್ಥಾಪಿಸಲು ಒಬ್ಬ ಅಮುಸ್ಲಿಮನಿಗೆ ಎಂದಿಗೂ ಸಾಧ್ಯವಿಲ್ಲ.

ನಾವು ಇತರ ಸಮುದಾಯಗಳ ಪ್ರವಾದಿಗಳನ್ನು ಎಂದಿಗೂ ನಿಂದಿಸುವುದಿಲ್ಲ. ಬದಲಾಗಿ, ಲೋಕದಲ್ಲಿ ಹಲವು ಕಾಲಘಟ್ಟಗಳಲ್ಲಿ ವಿವಿಧ ಜಾತಿಗಳೆಡೆಯಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನು ನಂಬಿ ಆದರಿಸುತ್ತೇವೆ. ಆ ಮಹಾತ್ಮರನ್ನು ಕೋಟಿಗಟ್ಟಲೆ ಜನರು ನಂಬಿ, ಅವರ ಹೆಸರಿನಲ್ಲಿ ಲೋಕದ ಯಾವುದಾದರೊಂದು ಕಡೆಯಲ್ಲಿರುವ ಒಂದು ಜನವಿಭಾಗ ಅನೇಕ ಯುಗಗಳಿಂದ ಸ್ನೇಹಾದರಗಳನ್ನು ಅರ್ಪಿಸುತ್ತಾ ಬರುತ್ತಿರುವುದೇ ಆ ಮಹಾತ್ಮರ ಸತ್ಯತೆಗೆ ತಕ್ಕುದಾದ ಸಾಕ್ಷ್ಯವಾಗಿದೆ. ಅವರು ದೇವ ನಿಯುಕ್ತರಾದ ಸತ್ಯಪುರುಷರಲ್ಲವಾಗಿದ್ದರೆ ಅವರ ಹೆಸರಿನಲ್ಲಿ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಸ್ಥಾಯಿಯಾದ ಭಕ್ತಿ ವಿಶ್ವಾಸಗಳು ನೆಲೆಗೊಂಡಿರಲು ಸಾಧ್ಯವಿಲ್ಲ. ಪರಮಾತ್ಮನು ನಿಯೋಜಿಸಿ ಕಳುಹಿಸುವ

ಮಹಾತ್ಮರಿಗೆ ಲಭಿಸುವ ರೀತಿಯ ಗೌರವಾದರಗಳು ಅನ್ಯರಿಗೆ ಲಭಿಸಲು ಆ ದೇವನು ಎಂದಿಗೂ ಎಡೆಗೊಡಲಾರನು. ಒಬ್ಬ ಮಿಥ್ಯಾವಾದಿ ಸತ್ಯಪ್ರವಾದಿಯಂತೆ ಅಭಿನಯಿಸಿ ಅವರ ಸ್ಥಾನವನ್ನು ವಶಪಡಿಸಲು ಭಾವಿಸುವನಾದರೆ ಅವನು ಹೆಚ್ಚು ವಿಳಂಬವಾಗದೆ ನಾಶಹೊಂದುವನು.

## ಆರ್ಯ ಸಮಾಜ ಮತ್ತು ವೇದ

ಇದೇ ಆಧಾರದಿಂದ ನಾವು ವೇದಗಳನ್ನು ದೈವಿಕವೆಂದು ನಂಬಿ, ವೈದಿಕ ಋಷಿಗಳನ್ನು ಮಹಾತ್ಮರೆಂದು ಗೌರವಿಸುತ್ತೇವೆ. ಆದರೆ ವೇದದ ಉಪದೇಶಗಳು ಹಿಂದುಗಳ ಯಾವುದೇ ಪಂಗಡವನ್ನು ಏಕದೇವ ಭಕ್ತರನ್ನಾಗಿ ಮಾಡಲಿಲ್ಲ ಮತ್ತು ಮಾಡಲು ಸಾಧ್ಯವೂ ಇರಲಿಲ್ಲ. ಈ ದೇಶದಲ್ಲಿರುವ ವಿಗ್ರಹಾರಾಧಕರು, ಅಗ್ನಿಪೂಜಕರು, ಸೂರ್ಯಾರಾಧಕರು, ಗಂಗಾರಾಧಕರು, ಸಹಸ್ರಾರು ದೇವತೆಗಳ ಪೂಜಕರು ಜೈನ ಧರ್ಮೀಯರು, ಶಾಕ್ತ ಧರ್ಮೀಯರು ಮೊದಲಾದವರೆಲ್ಲ ತಮ್ಮ ವಿಶ್ವಾಸ ಸಿದ್ಧಾಂತಗಳಿಗೆ ವೇದವನ್ನೇ ಆಧಾರ ಮಾಡಿಕೊಂಡಿದ್ದಾರೆ. ಹೀಗೆ ವೇದವು ವಿವಿಧ ಜಾತಿಗಳೆಲ್ಲವಕ್ಕೂ ತಮ್ಮ ಧಾರ್ಮಿಕ ಸಿದ್ಧಾಂತಗಳನ್ನು ಸ್ಥಾಪಿಸಲು ಆಧಾರವಾಗಿರುವ ಗ್ರಂಥವಾಗಿದೆ. ಆದರೆ ವೇದವು ಮನುಷ್ಯ ನಿರ್ಮಿತವಲ್ಲವೆಂದು ನಮ್ಮ ಅಭಿಪ್ರಾಯವಾಗಿದೆ. ಏಕೆಂದರೆ ಅವು ಮನುಷ್ಯ ನಿರ್ಮಿತವಾಗಿದ್ದರೆ ಕೋಟ್ಯಾನು ಕೋಟಿ ಜನರನ್ನು ಆಕರ್ಷಿಸಲಿಕ್ಕೂ ಅನೇಕ ಯುಗಗಳಿಂದ ನೆಲೆಯಲ್ಲಿರುವ ಒಂದು ಪದ್ಧತಿಯನ್ನು ಸ್ಥಾಪಿಸಲಿಕ್ಕೂ ಅದಕ್ಕೆ ಸಾಧ್ಯವಿರಲಿಲ್ಲ. ಶಿಲಾರಾಧನೆಯ ಕುರಿತು ವೇದದಲ್ಲಿ ಎಲ್ಲಿಯೂ ಹೇಳಲ್ಪಡದಿದ್ದರೂ ಅಗ್ನಿ, ವಾಯು, ಜಲ, ಚಂದ್ರ, ಸೂರ್ಯ ಮೊದಲಾದವುಗಳನ್ನು ಆರಾಧಿಸುವುದರ ಕುರಿತು ಉಪದೇಶಗಳು ವೇದದಲ್ಲಿ ಧಾರಾಳ ಇವೆ. ಅದರ ಒಂದು ಸೂಕ್ತವಾದರೂ ಪ್ರಸ್ತುತ ವಸ್ತುಗಳನ್ನು ಆರಾಧಿಸುವುದರ ಕುರಿತು ವಿರೋಧಿಸಿ ಹೇಳುವುದಿಲ್ಲ. ಹಾಗಿರುವಾಗ ಅವುಗಳನ್ನು ಆರಾಧಿಸುವ ಹಿಂದು ಧರ್ಮದಲ್ಲಿರುವ ಪುರಾತನ ಮತ ವಿಭಾಗಗಳೆಲ್ಲ ತಪ್ಪಾಗಿ ವರ್ತಿಸುವವೆಂದೂ ನವಜಾತ ಆರ್ಯಸಮಾಜ ಮಾತ್ರ ಸತ್ಪಥದಲ್ಲೆಂದೂ ಯಾರಿಗೆ ತೀರ್ಮಾನಿಸಲು ಸಾಧ್ಯ! ಪ್ರಸ್ತುತ ವಸ್ತುಗಳನ್ನು ಆರಾಧಿಸುವವರಿಗೆ, ಅವುಗಳ ಆರಾಧನೆಯ ಕುರಿತು ವೇದದಲ್ಲಿ ಪ್ರಸ್ತಾಪಿಸಲಾಗಿದೆಯೆಂದೂ ಅದಕ್ಕೆದುರಾಗಿ ಅದರಲ್ಲಿ ಎಲ್ಲಿಯೂ ಹೇಳಲಿಲ್ಲವೆಂಬುದಕ್ಕೂ ಒಳ್ಳೆಯ ರುಜುವಾತಿದೆ. ಅಗ್ನಿ,

ವಾಯು, ಇಂದ್ರ ಮೊದಲಾದ ವೇದೋಕ್ತ ಹೆಸರುಗಳು ಪರಮೇಶ್ವರನ ನಾಮಗಳಾಗಿವೆಯೆಂಬ ಆರ್ಯಸಮಾಜದ ವಾದವು ಪೂರ್ಣವಾಗಿ ಸ್ವೀಕೃತವಾಗಿಲ್ಲ. ಅದು ಸ್ವೀಕಾರ ಯೋಗ್ಯವಾಗಿದ್ದರೆ ವಾರಣಾಸಿಯಲ್ಲಿಯೂ ಇತರ ಹಿಂದೂ ನಗರಗಳಲ್ಲಿಯೂ ಇರುವ ದೊಡ್ಡ ದೊಡ್ಡ ಹಿಂದೂ ಪಂಡಿತರು ಆರ್ಯಸಮಾಜದ ವಿಶ್ವಾಸ ಸಿದ್ಧಾಂತಗಳನ್ನು ಸ್ವೀಕರಿಸದಿರಲಿಕ್ಕೆ ಕಾರಣವೇನೂ ಕಾಣುವುದಿಲ್ಲ. ಈ ನವೀನ ಸಮಾಜದವರು ತಮ್ಮ ನೂತನ ಸಿದ್ಧಾಂತಗಳನ್ನು ಪ್ರಚಾರಪಡಿಸಲು 30–35 ವರ್ಷಗಳಿಂದ ಭಗೀರಥ ಪ್ರಯತ್ನ ಮಾಡುತ್ತಿದ್ದರೂ ಈ ಮತವನ್ನು ಅವಲಂಬಿಸಿದ ಹಿಂದುಗಳು ಬಹಳ ವಿರಳ. ಸನಾತನ ಧರ್ಮೀಯರ ಮತ್ತು ಇತರ ಹಿಂದೂ ಮತವಿಭಾಗಗಳ ಜನಸಂಖ್ಯೆಯೊಡನೆ ಹೋಲಿಸಿ ನೋಡಿದರೆ ಆರ್ಯಸಮಾಜದವರ ಸಂಖ್ಯೆ ಅಲ್ಪವಾಗಿದೆ. ಇವರಿಗೆ ಇತರ ಹಿಂದೂ ಮತ ವಿಭಾಗಗಳ ಜನರ ಮೇಲೆ ದೊಡ್ಡ ಸ್ವಾಧೀನತೆ ಇನ್ನೂ ಲಭಿಸಿಲ್ಲ.

ಇದೇ ಪ್ರಕಾರ "ನಿಯೋಗ"ದ ಕುರಿತಿರುವ ಸಿದ್ಧಾಂತ ಸಹ ವೇದೋಕ್ತವೆಂದು ಹೇಳಲ್ಪಡುತ್ತದೆ. ಆದರೆ ಇದು ಮನುಷ್ಯನ ಸ್ವಭಾವಕ್ಕೂ ಆತ್ಮಾಭಿಮಾನಕ್ಕೂ ಕಳಂಕವನ್ನುಂಟುಮಾಡುವ ಅಸಹ್ಯವಾದ ಸಿದ್ಧಾಂತವಾಗಿದೆ. ಮೊದಲೇ ಹೇಳಿದಂತೆ ಈ ಸಿದ್ಧಾಂತ ಯಥಾರ್ಥ ವೇದೋಕ್ತವೆಂದು ಅಂಗೀಕರಿಸಲಾಗದು. ಇದು ಸ್ವಾರ್ಥ ಪರವಾದ ಉದ್ದೇಶದಿಂದ ಅನಂತರ ಕಾಲದಲ್ಲಿ ವೇದದೊಂದಿಗೆ ಸೇರಿಸಲ್ಪಟ್ಟದ್ದೆಂದು ವೇದದ ಕುರಿತು ಸದಭಿಪ್ರಾಯವನ್ನು ಹೊಂದಿರುವ ನಮ್ಮ ವಿಚಾರವಾಗಿದೆ. ವೇದಗಳು ಅವತೀರ್ಣವಾಗಿ ಹಲವು ಸಾವಿರ ವರ್ಷಗಳು ಕಳೆದ ಕಾರಣ ವಿವಿಧ ಕಾಲಗಳಲ್ಲಿ ವೇದದ ಭಾಷ್ಯಕಾರರು ಹಲವು ವಿಧದ ಹೆಚ್ಚು ಕಮ್ಮಿಗಳನ್ನು ಅದರ ವಚನಗಳಲ್ಲಿ ಮಾಡಿರುವುದು ಸಂಭಾವ್ಯವಾಗಿದೆ. ಆದರೆ ಆರ್ಯಾವರ್ತದ ಕೋಟ್ಯಾನುಕೋಟಿ ಜನರು ಸಹಸ್ರಾರು ವರ್ಷಗಳಿಂದ ವೇದವನ್ನು ದೇವಪ್ರೋಕ್ತವೆಂದು ನಂಬಿಕೊಂಡು ಬರುತ್ತಿರುವರೆಂಬುದೇ ಅದರ ಸತ್ಯತೆಗೆ ನಮಗೆ ತಕ್ಕುದಾದ ಸಾಕ್ಷ್ಯವಾಗಿದೆ. ವೇದಕ್ಕೆ ಸಿದ್ಧಿಸಿರುವ ರೀತಿಯ ಗೌರವಾದರಗಳು ಒಬ್ಬ ಮಿಥ್ಯಾವಾದಿಯ ವಚನಕ್ಕೆ ಲಭಿಸುವುದು ಎಂದಿಗೂ ಸಾಧ್ಯವಲ್ಲ.

ಮೇಲೆ ವಿವರಿಸಿದ ಅಡಚಣೆಗಳು ಇದ್ದರೂ, ನಾವು ಪರಮಾತ್ಮನ ಭಯದಿಂದ

ವೇದವನ್ನು ದೇವಪ್ರೋಕ್ತವೆಂದು ಅಂಗೀಕರಿಸುತ್ತೇವೆ. ಅದರ ಉಪದೇಶ ನಿರ್ದೇಶನಗಳಲ್ಲಿ ಕಂಡುಬರುವ ಕುಂದು ಕೊರತೆಗಳು ಅದರ ಭಾಷ್ಯಕಾರರಿಂದ ಉಂಟಾದುದೆಂದು ಭಾವಿಸುತ್ತೇವೆ. ಅದೇ ವೇಳೆ, ಪವಿತ್ರ ಖುರ್‌ಆನ್ ಆದಿಯಿಂದ ಅಂತ್ಯದವರೆಗೆ ಏಕದೇವಾರಾಧನೆಯ ಉಪದೇಶಗಳಿಂದ ತುಂಬಿರುವುದಾಗಿ ಕಾಣಬಹುದು. ಅದರಲ್ಲಿ ಎಲ್ಲಿಯೂ ಸೂರ್ಯ ಚಂದ್ರರನ್ನು ಆರಾಧಿಸುವ ಕುರಿತು ಉಪದೇಶವಿಲ್ಲ. ಪವಿತ್ರ ಖುರ್‌ಆನ್ ಈ ರೀತಿ ಉಪದೇಶಿಸಿದೆ: "**ಲಾ ತಸ್ಜುದೂ ಲಿಶ್ಶಮ್‌ಸಿ ವಲಾ ಲಿಲ್‌ಖಮರಿ ವಸ್ಜುದೂ ಲಿಲ್ಲಾಹಿಲ್ಲಧೀ ಖ಼ಲಖಹುನ್ನ**" – ನೀವು ಸೂರ್ಯನಿಗೂ ಚಂದ್ರನಿಗೂ ಸಾಷ್ಟಾಂಗ ಮಾಡಬಾರದು. ನಿಮ್ಮ ಸೃಷ್ಟಿಕರ್ತನಾದ ಪರಮಾತ್ಮನಿಗೆ ಮಾತ್ರ ಸಾಷ್ಟಾಂಗ ಮಾಡಿರಿ **(41:38)**. ಪವಿತ್ರ ಖುರ್‌ಆನ್ ಅದರ ಸತ್ಯತೆಗೆ ಸಾಕ್ಷ್ಯವಾಗಿ ಪೌರಾಣಿಕವೂ ಆಧುನಿಕವೂ ಆದ ದಿವ್ಯ ದೃಷ್ಟಾಂತಗಳನ್ನು ಹೊಂದಿದೆ. ಅದು ದೇವನ ಅಸ್ತಿತ್ವವನ್ನು ತೋರಿಸುವ ಒಂದು ಕನ್ನಡಿಯಾಗಿದೆ. ಹೀಗಿರುವಾಗ ಅಸಂಸ್ಕೃತರಂತೆ ಆ ಪವಿತ್ರ ಗ್ರಂಥವನ್ನು ದೂಷಿಸುವುದು ಸರಿಯೇ? ನಾವು ಆರ್ಯಸಮಾಜದವರನ್ನು ಗೌರವಿಸುವಂತೆ ನಮ್ಮನ್ನು ಅವರೇಕೆ ಅದೇ ದೃಷ್ಟಿಯಿಂದ ನೋಡುವುದಿಲ್ಲ? ರಾಜ್ಯದಲ್ಲೆಲ್ಲ ವಿರೋಧ ಹಾಗೂ ವಿದ್ವೇಷದ ಬೀಜ ಬಿತ್ತುವುದೇತಕ್ಕೆ? ಇದರಿಂದಾಗಿ ಏನಾದರೂ ಉತ್ತಮ ಪರಿಣಾಮ ಉಂಟಾಗುವುದೆಂದು ಅವರು ಆಶಿಸುತ್ತಾರೋ? ಪುಷ್ಪವನ್ನು ಅರ್ಪಿಸುವ ಒಬ್ಬಾತನಿಗೆ ಕಲ್ಲು ಎಸೆಯುವುದು ಹಾಗೂ ಹಾಲನ್ನು ನೀಡಿ ಸತ್ಕರಿಸುವವನಿಗೆ ಮೂತ್ರದ ಅಭಿಷೇಕವನ್ನು ಮಾಡುವುದು ಸರಿಯಾದ ವ್ಯವಹಾರವೋ?

## ಒಪ್ಪಂದ ಮಾಡಿಕೊಳ್ಳೋಣ

ಸಂಪೂರ್ಣವಾದ ಶಾಂತಿಯೂ ಮೈತ್ರಿಯೂ ನೆಲೆಸಲು ಹಿಂದುಗಳು ಮತ್ತು ಆರ್ಯ ಸಮಾಜದವರು ನಮ್ಮ ಪ್ರಿಯ ಪೈಗಂಬರರನ್ನು[ಸ] ಮಿಥ್ಯಾವಾದಿಯೆಂದು ತೆಗಳಿ ನಿಂದಿಸುವುದನ್ನು ನಿಲ್ಲಿಸಿ ಅವರನ್ನು ಪರಮಾತ್ಮನ ಸತ್ಯ ಪ್ರವಾದಿಯೆಂದು ಗೌರವಿಸಲು ಇನ್ನು ಮುಂದೆ ಸಿದ್ಧರಾಗುವರಾದರೆ ನಾನು ಒಂದು ಒಪ್ಪಂದಕ್ಕೆ ಎಲ್ಲರಿಗಿಂತಲೂ ಮುಂದಾಗಿ ಸಹಿ ಹಾಕಲು ತಯಾರಿರುವೆನು. ಈ ಒಪ್ಪಂದ ಪತ್ರದಲ್ಲಿ ಅಹ್ಮದಿಯಾ ಸಂಘಟನೆಯ ನಾವೆಲ್ಲರೂ ವೇದಗಳನ್ನೂ ಋಷಿಗಳನ್ನೂ ಆದರದಿಂದಲೂ ಸ್ನೇಹದಿಂದಲೂ ಕಾಣುವೆವೆಂದು ಬರೆದು ಕೊಡುವೆವು. ನಾವು

ಆ ಒಪ್ಪಂದದ ಪ್ರಕಾರ ನಡೆಯದಿದ್ದ ಪಕ್ಷದಲ್ಲಿ ಅದಕ್ಕೆ ದಂಡನೆಯ ರೂಪದಲ್ಲಿ ಹಿಂದುಗಳಿಗೆ ಒಂದು ದೊಡ್ಡ ಸಂಖ್ಯೆಯ ಹಣವನ್ನು (ಅದು ಮೂರು ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಲಾರದು) ಕೊಡುವೆವೆಂದು ಒಪ್ಪುತ್ತೇವೆ. ಹಿಂದುಗಳು ಹಾರ್ದಿಕವಾಗಿ ನಮ್ಮೊಡನೆ ಶಾಂತಿಯಿಂದಿರಲು ಇಚ್ಛಿಸುವರಾದರೆ ಅವರು ಸಹ ಇದೇ ರೀತಿಯ ಒಂದು ಕರಾರಿನಲ್ಲಿ ಸಹಿ ಮಾಡಬೇಕಾದುದು ಅಗತ್ಯವಾಗಿದೆ. ಅದು ಹೆಚ್ಚು ಕಡಿಮೆ ಈ ರೀತಿಯಾಗಿರಬೇಕಾಗಿದೆ: ನಾವು ಮುಹಮ್ಮದ್ ಪೈಗಂಬರರನ್ನು(ಸ) ಓರ್ವ ಸತ್ಯಪ್ರವಾದಿಯೆಂದು ಭಾವಿಸುವವರಾಗಿದ್ದೇವೆ. ಓರ್ವ ವಿಶ್ವಾಸಿಗೆ ಅರ್ಹವಾದ ರೀತಿಯಲ್ಲಿ ನಾವು ಅವರನ್ನು ಸದಾ ಗೌರವಾದರಗಳ ಸಹಿತ ಸ್ಮರಿಸುವೆವು. ನಾವಿದಕ್ಕೆ ತಪ್ಪಿದರೆ ಅಹ್ಮದಿಯಾ ಸಂಘಟನೆಯ ಮುಖಂಡರಿಗೆ ನಾವು ಮೂರು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರದ ಒಂದು ಮೌಲ್ಯವನ್ನು ದಂಡನೆಯಾಗಿ ಕೊಡುವೆವು.

ಅಹ್ಮದಿಯಾ ಸಂಘಟನೆಯ ಜನಸಂಖ್ಯೆ ಈಗ ನಾಲ್ಕು ಲಕ್ಷದಷ್ಟು ಇದೆ.* ಆದುದರಿಂದ ಇಂತಹ ಮಹತ್ತಾದೊಂದು ಕಾರ್ಯಕ್ಕಾಗಿ ಮೂರು ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವುದು ಒಂದು ದೊಡ್ಡ ಸಂಗತಿಯಲ್ಲ. ಅಹ್ಮದಿಯಾ ಸಂಘಟನೆಯಲ್ಲಿ ಸೇರದ ಇತರ ಮುಸ್ಲಿಮರು ಅಭಿಪ್ರಾಯದಲ್ಲಾಗಲೀ ಆದರ್ಶದಲ್ಲಾಗಲೀ ಐಕ್ಯಮತ್ಯವಿಲ್ಲದವರಾಗಿದ್ದಾರೆ. ಅವರು ಒಬ್ಬ ಮುಖಂಡನ ಕೈಕೆಳಗೆ ಇರುವವರಲ್ಲ. ಆದ್ದರಿಂದ ಅವರು ಈ ವಿಷಯದಲ್ಲಿ ಒಪ್ಪುವರೋ ಎಂದು ಹೇಳಲು ನನಗೆ ಸಾಧ್ಯವಿಲ್ಲ. ಅವರು ಈಗ ನನ್ನನ್ನೂ 'ಅವಿಶ್ವಾಸಿ'ಯೆಂದೂ ಕಪಟವಾದಿಯೆಂದೂ ಭಾವಿಸುತ್ತಾರೆ. ಆದರೂ ಹಿಂದುಗಳು ಮತ್ತು ನಾನು ಹೀಗೆ ಒಂದು ಒಪ್ಪಂದ ಮಾಡಿದ ಪಕ್ಷದಲ್ಲಿ, ಇತರ ಮುಸ್ಲಿಮರು ಇಂತಹ ಸುಸಂಸ್ಕೃತ ಜಾತಿಯವರ ಧರ್ಮಗ್ರಂಥವನ್ನೂ ಋಷಿಗಳನ್ನೂ ನಿಂದಿಸಿ ಅದಕ್ಕೆ ಪ್ರತಿಯಾಗಿ ನಮ್ಮ ಪ್ರವಾದಿಗೆ ಬೈಗಳು ಸುರಿಯುವಂತೆ ಮಾಡುವ ಅವಿವೇಕತನವನ್ನು ತೋರಲಾರರೆಂದೇ ನಾನು ನಂಬುತ್ತೇನೆ. ಇತರ ಮುಸ್ಲಿಮರು ಹಾಗೆ ವರ್ತಿಸುವರಾದರೆ ಅದಕ್ಕೆ ಪ್ರತೀಕಾರವಾಗಿ ಉಂಟಾಗುವ ಕೀಳು ಮಾತುಗಳಿಗೂ ಬೈಗಳಿಗೂ ಅವರೇ ಜವಾಬ್ದಾರರು. ಯಾವ ರೀತಿಯಲ್ಲೂ ಅಂತಹ ವರ್ತನೆ ಅಭಿಮಾನಕ್ಕೂ ಮರ್ಯಾದೆಗೂ ಅನುಯೋಜ್ಯವಲ್ಲದ ಕಾರಣ,

* ಈ ಸಂಖ್ಯೆ ಈ ಉಪನ್ಯಾಸ ಬರೆದ ಕಾಲದ್ದಾಗಿದೆ. ಈಗ ಅದು ಕೋಟಿಗಟ್ಟಲೆಯಾಗಿದೆ. – ಅನುವಾದಕ

ಪ್ರಸ್ತುತ ಒಪ್ಪಂದದ ನಂತರ ಇತರ ಮಸ್ಲಿಮರು ಹಿಂದುಗಳ ವೇದಗ್ರಂಥಗಳನ್ನೂ ಋಷಿಗಳನ್ನೂ ನಿಂದಿಸುವರೆಂದು ನಾನು ಭಾವಿಸುವುದಿಲ್ಲ. ಆದರೆ ಈ ಒಪ್ಪಂದದ ದೃಢೀಕರಣಕ್ಕಾಗಿ ಎರಡು ಪಕ್ಷಗಳಿಂದಲೂ ವಿವೇಕಿಗಳಾದ ಹತ್ತು ಹತ್ತು ಸಾವಿರ ಜನರು ಸಹಿ ಮಾಡಬೇಕಾದುದು ಅಗತ್ಯವಾಗಿದೆ.

ಪ್ರಿಯ ಜನರೇ, ಮೈತ್ರಿಗೆ ಸಮವಾದುದು ಇನ್ನೊಂದಿಲ್ಲ. ನಾವು ಎರಡು ಪಕ್ಷದವರೂ ಈ ಒಪ್ಪಂದದಿಂದ ಒಂದಾಗೋಣ; ಒಂದು ಜನಾಂಗವಾಗೋಣ, ಪರಸ್ಪರ ಪ್ರವಾದಿಗಳನ್ನೂ ಮಹಾಪುರುಷರನ್ನೂ ಧರ್ಮಗ್ರಂಥಗಳನ್ನೂ ಆಕ್ಷೇಪಿಸುವ ಕಾರಣದಿಂದ ಎಷ್ಟು ಛಿದ್ರತೆಯೂ ಗೊಂದಲವೂ ಉಂಟಾಗುವುದೆಂದೂ ರಾಜ್ಯಕ್ಕೆ ಎಷ್ಟು ನಷ್ಟವಾಗುವುದೆಂದೂ ನೀವು ಕಾಣುತ್ತಿದ್ದೀರಷ್ಟೇ. ಬನ್ನಿರಿ, ಇನ್ನು ಅನ್ಯೋನ್ಯ ಧರ್ಮಸಹಿಷ್ಣುತೆಯ ಅನುಗ್ರಹ ಫಲಗಳನ್ನು ಒಮ್ಮೆ ಪರೀಕ್ಷಿಸಿರಿ. ಇದು ಪರಸ್ಪರ ಸಂಧಾನವನ್ನುಂಟುಮಾಡಲೂ ಮೈತ್ರಿಭಾವವನ್ನು ಹೆಚ್ಚಿಸಲೂ ಉತ್ತಮ ಮಾರ್ಗವಾಗಿದೆ. ಇದಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ಮೈತ್ರಿ ಸ್ಥಾಪಿಸಲು ಯತ್ನಿಸುವುದಾದರೆ, ಅದು ಒಳಗಡೆ ದುರ್ಗಂಧವೂ ಕೀವೂ ತುಂಬಿರುವ ಕುರುವನ್ನು ಅದರ ಬಾಹ್ಯವಾದ ನಿರ್ಮಲತೆಯನ್ನೂ ಹೊಳಪನ್ನೂ ಕಂಡು ಸಂತೋಷಪಟ್ಟು ಹಾಗೆಯೇ ಬಿಟ್ಟುಬಿಡುವುದಕ್ಕೆ ಸಮಾನವಾಗಿದೆ.

## ಕಲಹಗಳಿಗೆ ಕಾರಣ

ಇತ್ತೀಚೆಗೆ ಹಿಂದೂ ಮುಸ್ಲಿಮರಲ್ಲಿ ಹೆಚ್ಚುತ್ತಿರುವ ಕಲಹಗಳಿಗೂ ವೈರಕ್ಕೂ ಧಾರ್ಮಿಕ ಭಿನ್ನತೆ ಮಾತ್ರವಲ್ಲ, ಇತರ ಲೌಕಿಕ ಅಭಿಲಾಷೆಗಳೂ ಲೌಕಿಕ ವ್ಯವಹಾರಗಳೂ ಕಾರಣವೆಂಬುದನ್ನು ಹೇಳುವುದರಲ್ಲಿ ನನಗೆ ಯಾವ ಉದ್ದೇಶವೂ ಇಲ್ಲ. ಉದಾಹರಣೆಗೆ, ಸರಕಾರದ ಆಡಳಿತದಲ್ಲಿ ತಮಗೆ ಅವಕಾಶ ಸಿಗಬೇಕೆಂಬ ಅಭಿಲಾಷೆ ಹಿಂದುಗಳಿಗೆ ಮೊದಲಿನಿಂದಲೇ ಇತ್ತು. ಕನಿಷ್ಟ ಪಕ್ಷ ಸರಕಾರದ ಆಡಳಿತದ ವ್ಯವಸ್ಥೆಯಲ್ಲಿ ತಮ್ಮ ಅಭಿಪ್ರಾಯವನ್ನು ಕೇಳಬೇಕೆಂದೂ ತಮ್ಮ ಆಕ್ಷೇಪಗಳನ್ನು ಸರಕಾರ ಗಮನಿಸಬೇಕೆಂದೂ ದೊಡ್ಡ ದೊಡ್ಡ ಹುದ್ದೆಗಳು ಇಂಗ್ಲಿಷರ ಹಾಗೆ ತಮಗೂ ದೊರಕಬೇಕೆಂದೂ ಅವರ ಕೋರಿಕೆಯಾಗಿತ್ತು. ಹಿಂದುಗಳ ಈ ಪ್ರಯತ್ನದಲ್ಲಿ ಸಹಭಾಗಿಗಳಾಗದಿದ್ದುದು ಮುಸ್ಲಿಮರ ದೊಡ್ಡ

ತಪ್ಪಾಯಿತು. ತಾವು ಹಿಂದುಗಳಿಗಿಂತ ಅಲ್ಪ ಸಂಖ್ಯಾತರಾದ ಕಾರಣ ಪ್ರಯತ್ನಗಳ ಫಲವೆಲ್ಲ ಹಿಂದುಗಳಿಗೆ ಮಾತ್ರ ದೊರಕುವುದೆಂದು ತಪ್ಪಾಗಿ ಗ್ರಹಿಸಿದ ಮುಸ್ಲಿಮರು ಹಿಂದುಗಳೊಂದಿಗೆ ಐಕ್ಯದಿಂದ ಪ್ರಯತ್ನಿಸುವ ಮಾತಿರಲಿ ಅವರು ಹಿಂದುಗಳ ಪ್ರಯತ್ನಕ್ಕೆ ತಡೆಯೊಡ್ಡಲು ಸಹ ಪ್ರಯತ್ನಿಸಿದರು. ಇದರಿಂದ ವಿರಸವು ವರ್ಧಿಸಿತು.

ಮೇಲಿನ ಸಂಗತಿಗಳು ಸಹ ದ್ವೇಷ ವರ್ಧಿಸಲು ಕಾರಣವಾದುವೆಂದು ನಾನು ಒಪ್ಪುತ್ತೇನೆ. ಆದರೆ ಇವೇ ಸಂಗತಿಗಳು ವೈಷಮ್ಯಕ್ಕೆ ಮೂಲಕಾರಣವೆಂದು ನಾನು ಒಪ್ಪುವುದಿಲ್ಲ. ಹಿಂದೂ ಮುಸ್ಲಿಮರ ಕಲಹ ಮತ್ತು ವೈರಕ್ಕೆ ಧಾರ್ಮಿಕ ವೈಷಮ್ಯ ಕಾರಣವಲ್ಲ; ರಾಜಕೀಯ ಸಂಗತಿಗಳು ಯಥಾರ್ಥ ಕಾರಣವೆಂಬ ಕೆಲವು ಗಣ್ಯರ ವಾದವನ್ನು ಕೂಡ ನಾನು ಒಪ್ಪುವುದಿಲ್ಲ.

ಮುಸ್ಲಿಮರು ತಮ್ಮ ಹಕ್ಕುಗಳನ್ನು ಪಡೆಯಲು ಹಿಂದೂಗಳ ಜೊತೆ ಸೇರಲು ಏಕೆ ಹೆದರುತ್ತಾರೆ? ಅವರು ಕಾಂಗ್ರೆಸಿನೊಂದಿಗೆ ಸೇರಲು ಏಕೆ ಹಿಂಜರಿಯುತ್ತಾರೆ? ಹಿಂದೂಗಳು ರಚಿಸಿದ ಮಾದರಿಯಲ್ಲೇ ಬೇರೊಂದು ಮುಸ್ಲಿಂ ಸಂಘವನ್ನು ಏಕೆ ಸ್ಥಾಪಿಸಿದರು? ಹಿಂದುಗಳೊಂದಿಗೆ ಸೇರಲು ತಮಗಿರುವ ಅನಾಸಕ್ತಿಯನ್ನು ಏಕೆ ವ್ಯಕ್ತಪಡಿಸಿದರು? ಇದಕ್ಕೆಲ್ಲ ಕಾರಣವೇನೆಂಬುದನ್ನು ಪ್ರತಿಯೊಬ್ಬ ವ್ಯಕ್ತಿ ಸುಲಭವಾಗಿ ತಿಳಿಯಲು ಸಾಧ್ಯವಿದೆ.

ಮಿತ್ರರೇ, ಇದಕ್ಕೆ ಏಕಮಾತ್ರ ಕಾರಣ ಧರ್ಮವಲ್ಲದೆ ಬೇರೆ ಏನೂ ಅಲ್ಲ. ಇದೇ ಹಿಂದುಗಳು ಇಂದು 'ಅಲ್ಲಾಹನ ಹೊರತು ಬೇರೆ ದೇವನಿಲ್ಲ, ಮುಹಮ್ಮದ್(ಸ) ಅವನ ಪುಣ್ಯದೂತ' ಎಂಬ ಸಾಕ್ಷ್ಯ ವಾಕ್ಯವನ್ನು ಉಚ್ಚರಿಸಿ ಮುಸ್ಲಿಮರನ್ನು ಆಲಿಂಗಿಸಿದರೆ ಅಥವಾ ಮುಸ್ಲಿಮರು ಇಸ್ಲಾಂ ಧರ್ಮವನ್ನು ತ್ಯಜಿಸಿ ಹಿಂದುಗಳಾಗಿ ಪರಿವರ್ತಿತರಾಗಿ ವೇದೋಕ್ತ ಪ್ರಕಾರ ಅಗ್ನಿ, ವಾಯುಗಳನ್ನು ಆರಾಧಿಸಲು ಪ್ರಾರಂಭಿಸುವರಾದರೆ ಈಗ ರಾಜಕೀಯವೆಂದು ಹೇಳಲಾಗುವ ಭಿನ್ನತೆಗಳೆಲ್ಲ, ಅವು ಮೊದಲು ಒಮ್ಮೆಯೂ ಉಂಟಾಗಿರಲಿಲ್ಲವೆಂಬ ರೀತಿಯಲ್ಲಿ ತನ್ನಿಂದ ತಾನೇ ಇಲ್ಲದಾಗುವುವು. ಇದರಿಂದಾಗಿ ಪರಸ್ಪರ ವೈರ ಮತ್ತು ದ್ವೇಷದ ಮೂಲ ಕಾರಣ ನಿಜವಾಗಿ ಧಾರ್ಮಿಕ ಭಿನ್ನತೆ ಎಂದು ತಿಳಿಯುತ್ತದೆ. ಈ ಧಾರ್ಮಿಕ ಮತಭೇದವು ಅತಿಯಾದಾಗೆಲ್ಲ ರಕ್ತದ ನದಿಗಳು ಹರಿದುವೆಂಬುದು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದ ಒಂದು ಸತ್ಯ ಸಂಗತಿಯಾಗಿದೆ.

## ಮುಸ್ಲಿಮರಿಗೆ ಉಪದೇಶ

ಮುಸ್ಲಿಂ ಬಂಧುಗಳೇ, ನಿಮ್ಮ ಧರ್ಮವು ಬೇರೆಯಾದ ಕಾರಣ ಹಿಂದುಗಳು ನಿಮ್ಮನ್ನು ಒಂದು ವಿಭಿನ್ನ ಜನಾಂಗವೆಂದು ಭಾವಿಸುತ್ತಾರೆ. ಇದೇ ಕಾರಣದಿಂದಲೇ ನೀವು ಅವರನ್ನು ಸಹ ಒಂದು ಭಿನ್ನ ಜನಾಂಗವೆಂದು ಭಾವಿಸುತ್ತೀರಿ. ಈ ಭಿನ್ನ ಭಾವನೆಗೆ ಸರಿಯಾದ ಒಂದು ಪರಿಹಾರವನ್ನು ಕಾಣದೆ ನಿಮಗೂ ಅವರಿಗೂ ಮಧ್ಯೆ ಯಥಾರ್ಥವೂ ಸುಸ್ಥಿರವೂ ಆದ ಸೌಹಾರ್ದಭಾವವನ್ನು ಸ್ಥಾಪಿಸುವುದು ಹೇಗೆ? ಉಭಯ ಪಕ್ಷದವರು ಸಹ ಪರಸ್ಪರ ಕಾಪಟ್ಯದಿಂದ ಕೂಡಿದ ಒಂದು ತಾತ್ಕಾಲಿಕ ಮೈತ್ರಿಯನ್ನುಂಟುಮಾಡಬಹುದು. ಆದರೆ ಯಥಾರ್ಥ ಮೈತ್ರಿಯೆಂದು ಹೇಳಲಾಗುವ ಭಾವೈಕ್ಯ ಉಂಟಾಗಲಿಕ್ಕೆ ಸಾಧ್ಯವಾಗುವುದು, ನೀವು ವೇದವನ್ನು ದೇವದತ್ತವೆಂದೂ ವೈದಿಕ ಋಷಿಗಳನ್ನು ದೇವನಿಯುಕ್ತರೆಂದೂ ಪ್ರಾಮಾಣಿಕವಾಗಿ ಅಂಗೀಕರಿಸುವುದರಿಂದಲೂ ಹಾಗೆಯೇ ಹಿಂದುಗಳು ಅವರ ಸಂಕುಚಿತ ಮನೋಭಾವಗಳನ್ನು ಬಿಟ್ಟು ನಮ್ಮ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಮುಸ್ತಫಾರ[ಸ] ಸತ್ಯತೆಯನ್ನು ಸಮ್ಮತಿಸುವುದರಿಂದಲೂ ಮಾತ್ರವಾಗಿದೆ. ನಿಮ್ಮ ಹಾಗೂ ಹಿಂದುಗಳ ಎಡೆಯಲ್ಲಿ ಯಥಾರ್ಥವಾದ ಐಕ್ಯ ಹಾಗೂ ಸೌಹಾರ್ದ ಉಂಟಾಗಲು ಇದು ಏಕಮಾತ್ರ ಮಾರ್ಗವೆಂದೂ ಹೃದಯದ ಮಾಲಿನ್ಯವನ್ನು ತೊಳೆಯುವ ನೀರೆಂದೂ ತಿಳಿಯಿರಿ. ಬೇರ್ಪಟ್ಟಿರುವ ಈ ಎರಡು ಸಮುದಾಯಗಳೆಡೆ ಸಂಧಾನವೇರ್ಪಡಲು ವಿಧಿಸಲ್ಪಟ್ಟ ದಿನದ ಆಗಮನವಾದರೆ ಪರಮಾತ್ಮನು ನಮ್ಮ ಹೃದಯಗಳನ್ನು ಇದಕ್ಕಾಗಿ ತೆರೆದ ಹಾಗೆ ಅವರ ಹೃದಯಗಳನ್ನು ಸಹ ತೆರೆಯುವನು.

ಇದು ಮಾತ್ರವಲ್ಲ, ನಾವು ಹಿಂದೂ ಮಿತ್ರರೊಂದಿಗೆ ಅನುಕಂಪವನ್ನು ತೋರಿಸಿ ಅವರೊಡನೆ ಪ್ರೀತಿಯಿಂದ ಉತ್ತಮ ರೀತಿಯಲ್ಲಿ ವರ್ತಿಸಬೇಕಾಗಿದೆ. ಅವರ ಮನೋವೇದನೆಗೆ ಕಾರಣವಾಗುವ ಸಂಗತಿಗಳು ನಮ್ಮ ಧರ್ಮದ ನಿರ್ಬಂಧ ಕರ್ತವ್ಯಗಳೋ ಅಥವಾ ಆವಶ್ಯಕರ್ಮಗಳೋ ಅಲ್ಲವಾದರೆ, ಹಾಗಿರುವ ಸಂಗತಿಗಳಿಂದ ನಾವು ದೂರವಿರಬೇಕಾಗಿದೆ. ಹಿಂದುಗಳು ಹೃತ್ಪೂರ್ವಕವಾಗಿ ನಮ್ಮ ಪೈಗಂಬರರನ್ನು[ಸ] ಒಬ್ಬ ಸತ್ಯ ಪ್ರವಾದಿಯೆಂದು ಆದರದಿಂದ ಸಮ್ಮತಿಸಿದರೆ ಗೋವಿನ ಕಾರಣದಿಂದ ನಮ್ಮಲ್ಲಿ ಉಂಟಾಗುತ್ತಿರುವ ವೈಷಮ್ಯವನ್ನು ನಿವಾರಿಸಲು

ಸಾಧ್ಯವಿದೆ. ನಮಗೆ ತಿನ್ನಲು ಅನುಮತಿ ಇರುವ ಆಹಾರ ವಸ್ತುಗಳನ್ನು ತಿಂದೇ ತೀರಬೇಕೆಂಬ ನಿರ್ಬಂಧವೇನೂ ಇಲ್ಲ. ಅನುಮತನೀಯವಾದ ಎಲ್ಲವನ್ನು ಮಾಡುವುದು ಕಡ್ಡಾಯವಲ್ಲ. ಅನುಮತಿಯಿದ್ದರೂ ಮಾಡದ ಅನೇಕ ಸಂಗತಿಗಳು ಇವೆ. ಏಕದೇವವನ್ನು ನಂಬಿರಿ ಎಂಬ ಉಪದೇಶದ ಹಾಗೆಯೇ ಅವರೊಡನೆ (ಇತರ ಧರ್ಮೀಯರೊಂದಿಗೆ) ಅನುಕಂಪ ಹಾಗೂ ಸಹಿಷ್ಣುತೆಯಿಂದ ವರ್ತಿಸಬೇಕೆಂಬುದು ಸಹ ನಮ್ಮ ಧರ್ಮದ ಉಪದೇಶಗಳಲ್ಲೊಂದಾಗಿದೆ. ಆದುದರಿಂದ ಅತ್ಯಾವಶ್ಯಕವೂ ಗುಣಕರವೂ ಆದ ಒಂದು ಕಾರ್ಯಕ್ಕಾಗಿ ಅಷ್ಟು ಅಗತ್ಯವಿಲ್ಲದ ಒಂದನ್ನು ಬಿಡುವುದು ಧಾರ್ಮಿಕ ನಿಯಮಗಳಿಗೆ ವಿರೋಧವಾಗಲಾರದು. ಅನುಮತನೀಯ ಎಂದು ತಿಳಿಯುವುದು ಮತ್ತು ಅನುಮತನೀಯವಾದದ್ದನ್ನು ಉಪಯೋಗಿಸುವುದು ಭಿನ್ನ ಭಿನ್ನ ಕಾರ್ಯಗಳಾಗಿವೆ. ಪರಮಾತ್ಮನು ವಿರೋಧಿಸಿದ ಕಾರ್ಯಗಳಿಂದೆಲ್ಲ ದೂರವಿದ್ದು ಅವನ ಸಂಪ್ರೀತಿಯನ್ನು ಅರಸಿಕೊಂಡು ಅವನ ಸಕಲ ಸೃಷ್ಟಿಗಳಿಗೂ ಒಳಿತನ್ನೂ ಉಪಕಾರವನ್ನೂ ಮಾಡಿ ಎಲ್ಲರೊಡನೆ ಅನುಕಂಪ ತೋರಿಸಿ ಈ ಪ್ರಪಂಚದಲ್ಲಿ ಬಂದ ಪ್ರವಾದಿಗಳೆಲ್ಲರೂ ಆಯಾಯ ಕಾಲದಲ್ಲಿ ಮನುಷ್ಯರನ್ನು ಉದ್ಧರಿಸಲು ಅವತೀರ್ಣರಾದ ದಿವ್ಯದೂತರೆಂದೂ ಸುಧಾರಕರೆಂದೂ ನಂಬಿ ಅವರೆಡೆಯಲ್ಲಿ ವ್ಯತ್ಯಾಸವನ್ನುಂಟುಮಾಡದೆ ಎಲ್ಲ ಮನುಕುಲದ ಸೇವೆ ಮಾಡುವುದೇ ನಮ್ಮ ಧರ್ಮದ ಸಂಕ್ಷಿಪ್ತ ರೂಪವಾಗಿದೆ. ಆದರೆ ನಮ್ಮ ಶ್ರೇಷ್ಠ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ತುಸುವಾದರೂ ದೇವಭಯವಿಲ್ಲದೆ ಅನ್ಯಾಯವಾಗಿ ನಿಂದಿಸಿ ಆಕ್ಷೇಪಿಸುತ್ತಿರುವವರೊಡನೆ, ಹಝ್ರತ್ ಪೈಗಂಬರರ[ಸ] ಮೇಲೆ ಅನ್ಯಾಯಕರವಾಗಿ ದೋಷವನ್ನು ಆರೋಪಿಸುತ್ತಿರುವವರೊಡನೆ ನಾವು ಹೇಗೆ ಮೈತ್ರಿಯನ್ನು ಉಂಟುಮಾಡುವುದು? ನಾನು ಸತ್ಯವಾಗಿ ನಿಮ್ಮೊಡನೆ ಹೇಳುತ್ತೇನೆ: ಮರುಭೂಮಿಯ ಸರ್ಪಗಳೊಡನೆಯೂ ಕಾಡಿನ ತೋಳಗಳೊಡನೆಯೂ ನಮಗೆ ಐಕ್ಯಭಾವದಿಂದಲೂ ಸೌಹಾರ್ದದಿಂದಲೂ ವರ್ತಿಸಲು ಸಾಧ್ಯವಾದರೂ ನಮ್ಮ ಜೀವಕ್ಕಿಂತಲೂ ಮಾತಾಪಿತರಿಗಿಂತಲೂ ಹೆಚ್ಚು ಪ್ರಿಯರಾದ ಪವಿತ್ರ ಪೈಗಂಬರರ[ಸ] ಮೇಲೆ ದೋಷಾರೋಪಣೆಯನ್ನು ಮಾಡುವವರೊಡನೆ ನಮಗೆ ಮೈತ್ರಿಯಿಂದ ಸಹಬಾಳ್ವೆ ನಡೆಸಲು ಅಸಾಧ್ಯ. ಪರಮಾತ್ಮನು ನಮ್ಮನ್ನು ಇಸ್ಲಾಮಿನಲ್ಲೇ

ಇದ್ದುಕೊಂಡು ಮೃತಪಡಿಸಿ ಅನುಗ್ರಹಿಸಲಿ. ನಾವು ಧರ್ಮ ವಿಶ್ವಾಸಕ್ಕೆದುರಾಗಿ ಏನನ್ನೂ ಮಾಡಲು ತಯಾರಿಲ್ಲ.

* * * * *

ನಾನೀಗ ಈ ಸಂದರ್ಭದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ಸಮುದಾಯವನ್ನು ಕಾರಣವಿಲ್ಲದೆ ದೂಷಿಸಲು ಇಚ್ಛಿಸುವುದಿಲ್ಲ; ಯಾರ ಮನಸ್ಸನ್ನೂ ನೋಯಿಸಲು ಬಯಸುವುದಿಲ್ಲ. ಆದರೆ ಇಸ್ಲಾಂ ಹಾಗೂ ಪವಿತ್ರ ಖುರ್‌ಆನಿಗೆದುರಾಗಿ ದೊಡ್ಡ ಅನ್ಯಾಯವಾಗಿದೆಯೆಂದು ಹೃದಯ ನೊಂದು ನಾನಿಲ್ಲಿ ಪ್ರಸ್ತಾಪಿಸಬೇಕಾಗಿದೆ. ಇಸ್ಲಾಂ ಯಾವುದೇ ಸಮುದಾಯದ ಧರ್ಮ ಧುರೀಣರನ್ನು ಒಮ್ಮೆಯೂ ದೂಷಿಸದ ಪರಿಶುದ್ಧ ಮತ್ತು ಮೈತ್ರಿಯ ಧರ್ಮವಾಗಿದೆ. ಪವಿತ್ರ ಖುರ್‌ಆನ್ ಎಲ್ಲ ಜಾತಿಯ ಪ್ರವಾದಿಗಳನ್ನು ಅಂಗೀಕರಿಸಿ, ವಿವಿಧ ಜಾತಿಗಳೆಡೆಯಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ಸ್ಥಾಪಿಸುವ ಒಂದು ಮಹತ್ತಾದ ಗ್ರಂಥವಾಗಿದೆ. ಜಗತ್ತಿನ ಧರ್ಮಗ್ರಂಥಗಳಲ್ಲಿ ಪವಿತ್ರ ಖುರ್‌ಆನಿಗೆ ಮಾತ್ರವೇ ಈ ಸೌಭಾಗ್ಯ ಸಿದ್ಧಿಸಿದೆ. ಪ್ರವಾದಿಗಳ ಕುರಿತು ಆ ಪವಿತ್ರ ಗ್ರಂಥ ಹೀಗೆ ಕಲಿಸುತ್ತದೆ: "**ಲಾ ನುಫರ್ರಿಕು ಬೈನ ಅಹದಿಮ್ಮಿನ್‌ಹುಮ್ ವ ನಹ್‌ನು ಲಹೂ ಮುಸ್ಲಿಮೂನ್**" ಎಂದರೆ, ವಿಶ್ವಾಸಿಗಳೇ ಹೇಳಿರಿ: ನಾವು ಈ ಪ್ರಪಂಚದಲ್ಲಿ ಆವಿರ್ಭವಿಸಿದ ಸಕಲ ಪ್ರವಾದಿಗಳನ್ನು ನಂಬುತ್ತೇವೆ. ಕೆಲವರನ್ನು ನಂಬಿ ಮತ್ತೆ ಕೆಲವರನ್ನು ನಂಬದೆ ಅವರೆಡೆಯಲ್ಲಿ ವ್ಯತ್ಯಾಸವನ್ನು ಭಾವಿಸುವುದಿಲ್ಲ **(2: 137).** ಹೀಗೆ ಶಾಂತಿಯನ್ನು ಸ್ಥಾಪಿಸುವ ಉಪದೇಶದಿಂದ ಕೂಡಿದ ಬೇರಾವುದಾದರೂ ದೈವಿಕ ಗ್ರಂಥ ಲೋಕದಲ್ಲಿದ್ದರೆ ಅದರ ಹೆಸರು ಹೇಳಿರಿ. ಸರ್ವದಾತನಾದ ಪರಮಾತ್ಮನ ಸಾರ್ವತ್ರಿಕ ಕೃಪೆಯನ್ನು ಯಾವುದಾದರೊಂದು ಗೋತ್ರಕ್ಕೋ ವರ್ಗಕ್ಕೋ ಪವಿತ್ರ ಖುರ್‌ಆನ್ ಸೀಮಿತಗೊಳಿಸುವುದಿಲ್ಲ. ಅದು ಇಸ್ರಾಈಲ್ ಗೋತ್ರದಲ್ಲಿ ಆವಿರ್ಭವಿಸಿದ ಯಾಕೂಬ್[ಅ], ಇಸ್‌ಹಾಕ್[ಅ], ಮೂಸಾ[ಅ], ದಾವೂದ್[ಅ], ಈಸಾ[ಅ] ಮೊದಲಾದ ಪ್ರವಾದಿಗಳೆಲ್ಲರನ್ನೂ ಅಂಗೀಕರಿಸುತ್ತದೆ ಮತ್ತು ಪರ್ಷಿಯಾದಲ್ಲೋ ಭಾರತದಲ್ಲೋ ಇನ್ನಿತರ ದೇಶದಲ್ಲೋ ಆಗಮಿಸಿದ ಪ್ರವಾದಿಗಳಲ್ಲಿ ಯಾರನ್ನೂ ವ್ಯಾಜವಾದಿಯೆಂದೋ ಕಪಟಿಯೆಂದೋ

ಹೇಳುವುದಿಲ್ಲ. ತದ್ವಿರುದ್ಧವಾಗಿ, ಎಲ್ಲ ರಾಜ್ಯದಲ್ಲೂ ಸಮುದಾಯದಲ್ಲೂ ಪ್ರವಾದಿಗಳಿದ್ದರೆಂದು ಸ್ಪಷ್ಟವಾಗಿ ಪ್ರಸ್ತಾಪಿಸುತ್ತಾ ಸಕಲ ಸಮುದಾಯಗಳೆಡೆಯಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ಸ್ಥಾಪಿಸಲು ಒಂದು ತಳಹದಿಯನ್ನು ಅದು ದೃಢಪಡಿಸಿದೆ. ಆದರೆ ಶಾಂತಿಯ ಸಂದೇಶವಾಹಕನಾದ ಆ ಪ್ರವಾದಿಶ್ರೇಷ್ಠರನ್ನು ಇತರ ಜಾತಿಯವರು ನಿಂದಿಸುವುದೂ ಆಕ್ಷೇಪಿಸುವುದೂ ಖೇದಕರವಾಗಿದೆ.

ಪ್ರಿಯ ದೇಶಬಾಂಧವರೇ, ನಾನು ಇಷ್ಟು ಹೇಳಿದ್ದು ನಿಮ್ಮನ್ನು ದುಃಖಕ್ಕೆ ಗುರಿಪಡಿಸಲಿಕ್ಕೋ ನಿಮ್ಮ ಮನನೋಯಿಸಲೋ ಅಲ್ಲ. ಸದ್ವಿಚಾರದಿಂದ ಕೂಡಿ ನಿಮಗೆ ಒಂದು ಸಂಗತಿಯನ್ನು ನಿವೇದಿಸಲಿಕ್ಕಾಗಿ ಮಾತ್ರ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಇತರ ಸಮುದಾಯಗಳ ಪ್ರವಾದಿಗಳನ್ನೂ ಮಹಾತ್ಮರನ್ನೂ ವಿನಾ ಕಾರಣ ಬಯ್ಯುವುದು, ನಿಂದಿಸುವುದು ಒಂದು ಅಭ್ಯಾಸ ಮಾಡಿ, ಈ ಕೆಟ್ಟ ಸಂಪ್ರದಾಯವು ತಮ್ಮ ಧರ್ಮದ ಭಾಗವೆಂಬಂತೆ ಭಾವಿಸುವ ಎಲ್ಲ ಸಮುದಾಯದವರೂ ಅವರ ಈ ಅನ್ಯಾಯವಾದ ಕಾಯಕದ ಕಾರಣದಿಂದ ದೇವದೃಷ್ಟಿಯಲ್ಲಿ ಪಾಪಿಗಳಾಗುವರು. ಮಾತ್ರವಲ್ಲ, ಅವರು ಸಮುದಾಯಗಳೆಡೆಯಲ್ಲಿ ವಿರೋಧ ಹಾಗೂ ವಿದ್ವೇಷದ ಬೀಜ ಬಿತ್ತಿದರೆಂಬ ತಪ್ಪಿಗೂ ಗುರಿಯಾಗುತ್ತಾರೆ. ಒಬ್ಬನು ಮತ್ತೊಬ್ಬನ ತಂದೆಯನ್ನು ಬಯ್ದರೆ ಅಥವಾ ತಾಯಿಯ ಹೆಸರಿನಲ್ಲಿ ಅಪವಾದವನ್ನು ಹೊರಿಸಿದರೆ ಅವನು ಸ್ವತಃ ತನ್ನ ಮಾತಾಪಿತರ ಮಾನಹಾನಿ ಮಾಡಿದಂತಲ್ಲವೇ? ಯಾರು ಈ ರೀತಿಯ ನಿಂದನೆಗೆ ಗುರಿಯಾಗುತ್ತಾನೋ, ಅವನು ಸಹ ಅದಕ್ಕೆದುರಾಗಿ ತನಗೆ ಬಯ್ದವನಿಗೆ ಅದೇ ಭಾಷೆಯಲ್ಲಿ ಬಯ್ದರೆ, ಈ ನಿಂದನೆಗೆ ಯಥಾರ್ಥವಾಗಿ ಕಾರಣೀಭೂತನು ಮೊದಲು ಬಯ್ದವನಲ್ಲವೇ? ಈ ನೆಲೆಯಲ್ಲಿ ತನ್ನ ಮಾತಾಪಿತರ ಮಾನದ ಶತ್ರು ಅವನೇ ಆಗುವನಲ್ಲವೇ?

* * * * *

ಪರಮಾತ್ಮನು ಪವಿತ್ರ ಖುರ್‌ಆನಿನಲ್ಲಿ ನಮಗೆ ಹಲವು ಶಿಷ್ಟಾಚಾರ ಮತ್ತು ಸಭ್ಯ ನಡವಳಿಕೆಯ ಪಾಠಗಳನ್ನು ಕಲಿಸಿದ್ದಾನೆ. ಅವನು ಹೀಗೆ ಉಪದೇಶಿಸುತ್ತಾನೆ: "**ವಲಾ ತಸುಬ್ಬುಲ್ಲಧೀನ ಯದ್‌ಊನ ಮಿನ್‌ದೂನಿಲ್ಲಾಹಿ ಫಯಸುಬ್ಬುಲ್ಲಾಹ ಅದ್‌ವಂಬಿಗೈರಿ ಇಲ್ಮಿ**" ಎಂದರೆ, ನೀವು ಬಹುದೇವಾರಾಧಕರ ವಿಗ್ರಹಗಳನ್ನು ಹೀಯಾಳಿಸಬೇಡಿರಿ.

ಇಲ್ಲದಿದ್ದರೆ ಅವರು ನಿಮ್ಮ ದೇವನನ್ನು ಅವಹೇಳನ ಮಾಡುವರು. ಏಕೆಂದರೆ ಅವರು ನಿಮ್ಮ ದೇವನ ಕುರಿತು ತಿಳಿಯದವರಾಗಿರುವರು **(6:109).** ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ವಿಗ್ರಹಗಳಿಗೆ ಯಾವುದೇ ಸ್ಥಾನವಿಲ್ಲದಿದ್ದರೂ ಅವುಗಳನ್ನು ಅವಹೇಳನ ಮಾಡದೆ ಅವುಗಳ ಆರಾಧಕರನ್ನು ಸೌಮ್ಯವಾಗಿ ಉಪದೇಶಿಸಬೇಕೆಂದು ದೇವನು ಆಜ್ಞಾಪಿಸಿರುವನು. ಹೀಗೆ ಮಾಡದಿದ್ದರೆ ಅವುಗಳ ಆರಾಧಕರು ಕೋಪಗೊಂಡು ಯಥಾರ್ಥ ಪರಮಾತ್ಮನನ್ನೇ ಬಯ್ಯುವುದಕ್ಕೂ ನೀವೇ ಕಾರಣರಾಗುವಿರಿ ಎಂದು ಮುಸ್ಲಿಮರಿಗೆ ದೇವನು ಉಪದೇಶಿಸಿರುವನು. ಇಂತಹ ವಿಶಿಷ್ಟವಾದ ಉಪದೇಶವನ್ನು ನೀಡಿರುವ ಇಸ್ಲಾಮಿನ ಆ ಮಹನೀಯ ಪ್ರವಾದಿಯನ್ನು ಬಯ್ಯಲಿಕ್ಕೂ ನಿಂದಿಸಲಿಕ್ಕೂ ಅಪಕೀರ್ತಿಯನ್ನುಂಟುಮಾಡಲಿಕ್ಕೂ ಅಸಭ್ಯ ರೀತಿಯಲ್ಲಿ ಆಕ್ಷೇಪಿಸಲಿಕ್ಕೂ ಸನ್ನದ್ಧರಾಗುವವರ ಸ್ಥಿತಿ ಎಂತಹದ್ದು! ಯಾರ ಹೆಸರು ಕೇಳುವಾಗ ಇಸ್ಲಾಮಿನ ಮಹಾಚಕ್ರವರ್ತಿಗಳು ಸಹ ಸಿಂಹಾಸನಗಳಿಂದ ಎದ್ದು ನಿಲ್ಲುತ್ತಾರೋ, ಯಾರ ಶಾಸನಗಳಿಗೆ ಅವರು ತಲೆಬಾಗುತ್ತರೋ, ಯಾರ ಕಿರಿಯ ದಾಸರಾಗಿ ಸ್ವಯಂ ಪರಿಗಣಿಸುವುದರಲ್ಲಿ ಅಭಿಮಾನಗೊಳ್ಳುವರೋ, ಹಾಗಿರುವ ಓರ್ವ ಶ್ರೇಷ್ಠ ಪ್ರವಾದಿಯಾಗಿದ್ದಾರೆ ಆದರಣೀಯರಾದ ಹಝ್ರತ್ ಮುಹಮ್ಮದ್ ಪೈಗಂಬರರು(ಸ). ಈ ಗೌರವ ಪರಮಾತ್ಮನಿಂದ ಲಭಿಸಿದ ಒಂದು ಸೌಭಾಗ್ಯವಲ್ಲವೇ? ಹೀಗೆ ಪರಮಾತ್ಮನಿಂದ ಗೌರವಾನ್ವಿತರಾದ ಆ ಪುಣ್ಯಾತ್ಮರನ್ನು ನಿಂದಿಸುವುದು ಪರಮಾತ್ಮನೊಡನೆ ಹೋರಾಟಕ್ಕೆ ಹೊರಟಂತೆ. ಯಾವ ಮಹಾತ್ಮನ ಸತ್ಯತೆಯನ್ನೂ ಮಹತ್ವವನ್ನೂ ಪ್ರಕಟಿಸಲಿಕ್ಕಾಗಿ ಪರಮಾತ್ಮನು ಲೋಕಕ್ಕೆ ಮಹತ್ತರವಾದ ದೃಷ್ಟಾಂತಗಳನ್ನು ತೋರಿಸಿಕೊಟ್ಟನೋ, ಅಂತಹ ಶ್ರೇಷ್ಠ ಪ್ರವಾದಿಯಾಗಿದ್ದಾರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ). ಇಪ್ಪತ್ತು ಕೋಟಿ ಮನುಷ್ಯರನ್ನು ಆ ಪುಣ್ಯಾತ್ಮನ ಆಸ್ಥಾನದಲ್ಲಿ ನಮ್ರ ಶಿರಸ್ಸರನ್ನಾಗಿ ಮಾಡಿದ್ದು ಪರಮಾತ್ಮನ ಕೆಲಸವಲ್ಲವೇ? ಎಲ್ಲ ಪ್ರವಾದಿಗಳಿಗೂ ತಂತಮ್ಮ ಸತ್ಯತೆಗೆ ಪುರಾವೆಗಳಾಗಿ ಹಲವಾರು ಸಾಕ್ಷ್ಯಗಳಿರುತ್ತವೆ. ಆದರೆ ಪವಿತ್ರ ಮುಹಮ್ಮದ್ ಪೈಗಂಬರರ(ಸ) ಸತ್ಯತೆಗೆ ಪುರಾವೆಯಾಗಿ ಲೋಕದಲ್ಲಿ ಪ್ರತ್ಯಕ್ಷಗೊಳ್ಳುತ್ತಿರುವ ದೃಷ್ಟಾಂತಗಳು ಇನ್ಯಾವ ಪ್ರವಾದಿಯಲ್ಲಿಯೂ ಉದಾಹರಣೆ ಸಿಗದ ಮಟ್ಟಿಗೆ ಅತುಲ್ಯವಾಗಿದೆ.

## ಕಾಲದ ಸಾಕ್ಷ್ಯ

ಲೋಕವು ಪಾಪ ಮತ್ತು ಅಧರ್ಮದಿಂದ ಹಾಳಾಗಿ, ದುಷ್ಕೃತ್ಯಗಳೂ ದುನರ್ದತೆಗಳೂ ಪ್ರಬಲಗೊಂಡು, ಸತ್ಕರ್ಮ ಕ್ಷಯಿಸಿದಾಗ ಈ ದುಸ್ಥಿತಿಗೆ ಪರಿಹಾರವನ್ನುಂಟುಮಾಡಿ ಅದರ ಮುಖಾಂತರ ಲೋಕವನ್ನು ಸುಧಾರಿಸಲಿಕ್ಕಾಗಿ ತನ್ನ ಒಬ್ಬ ವರಿಷ್ಠ ದಾಸನನ್ನು ನಿಯೋಜಿಸಲು ಕರುಣಾನಿಧಿಯಾದ ಪರಮಾತ್ಮನ ಕೃಪೆ ಆವಶ್ಯಪಡುತ್ತದೆ. ಆಧ್ಯಾತ್ಮಿಕ ರೋಗ ಒಬ್ಬ ಆಧ್ಯಾತ್ಮಿಕ ವೈದ್ಯನನ್ನು ಆವಶ್ಯಪಡುತ್ತದೆ. ಈ ವಿಷಯವನ್ನು ಹಿಂದುಗಳು ಎಲ್ಲರಿಗಿಂತ ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು. ಏಕೆಂದರೆ, ವೇದವು ಅವತೀರ್ಣವಾದದ್ದು ಲೋಕದಲ್ಲಿ ಅಧರ್ಮ ವ್ಯಾಪಕವಾಗಿದ್ದ ಒಂದು ಕಾಲದಲ್ಲಲ್ಲ, ಪಾಪದ ಪ್ರವಾಹ ಇಲ್ಲದ ಒಂದು ಕಾಲದಲ್ಲಾಗಿದೆ ಎಂದು ಹಿಂದುಗಳು ನಂಬುತ್ತಾರೆ. ಪಾಪವು ತೀರಾ ಇಲ್ಲದ ಒಂದು ಕಾಲದಲ್ಲಿ ಲೋಕಕ್ಕೆ ಹೀಗೆ ಮಾರ್ಗದರ್ಶನವನ್ನು ನೀಡಿದ ಪರಮಾತ್ಮನು ಸರ್ವತ್ರ ಪಾಪವು ಆಧಿಪತ್ಯವನ್ನು ನಡೆಸಿಕೊಂಡಿದ್ದ ಒಂದು ಕಾಲದಲ್ಲಿ ಒಬ್ಬ ಪ್ರವಾದಿಯನ್ನು ಖಂಡಿತವಾಗಿ ನಿಯೋಜಿಸಿರಬೇಕೆಂದು ನಂಬುವುದು ವಿವೇಕಯುತವಲ್ಲವೇ? ಹಝ್ರತ್ ಮುಹಮ್ಮದ್ ಪೈಗಂಬರರು(ಸ) ದೇವಸಂದೇಶವಾಹಕರಾಗಿ ಆಗಮಿಸಿದ ಆ ಕಾಲದಲ್ಲಿ ಅಧರ್ಮವೂ ಅವಿಶ್ವಾಸವೂ ವ್ಯಾಪಿಸದ ಒಂದು ರಾಜ್ಯವೂ ಬಾಕಿಯಾಗಿರಲಿಲ್ಲ. ಹಾಗೆ ಲೋಕವಿಡೀ ಅಂಧಕಾರದಲ್ಲಿ ಮುಳುಗಿತ್ತು ಎಂಬ ಐತಿಹಾಸಿಕ ಸತ್ಯವನ್ನು ತಿಳಿಯದವರು ನಿಮ್ಮೆಡೆಯಲ್ಲಿರಬಹುದೆಂದು ನಾನು ಭಾವಿಸುವುದಿಲ್ಲ. ಈ ಸತ್ಯಾಂಶವನ್ನು ಪಂಡಿತ್ ಶ್ರೀ ದಯಾನಂದರು ಸಹ ಒಪ್ಪಿದ್ದರು. ಅಂದು ಆರ್ಯಾವರ್ತದಲ್ಲಿ ಸಹ ದೇವಾರಾಧನೆಗೆ ಬದಲು ಮೂರ್ತಿ ಪೂಜೆ ನೆಲೆಗೊಂಡಿದ್ದು, ವೈದಿಕ ಧರ್ಮದಲ್ಲಿ ಬಹಳ ದುರಾಚಾರಗಳು ಸೇರಿಕೊಂಡಿದ್ದುವೆಂದು ಅವರು ತಮ್ಮ **'ಸತ್ಯಾರ್ಥ ಪ್ರಕಾಶ'**ದಲ್ಲಿ ಉಲ್ಲೇಖಿಸಿದ್ದಾರೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆವಿರ್ಭಾವದ ಕಾಲದಲ್ಲಿ ವ್ಯಾಪಿಸಿದ್ದ ಅಧರ್ಮದ ಕುರಿತು ಓರ್ವ ದೊಡ್ಡ ಕ್ರೈಸ್ತ ಪಾದ್ರಿಯೂ ಯುರೋಪ್ಯನ್ ಮಿಶನರಿಯೂ ಆಗಿದ್ದ ಪಾದ್ರಿ ಫೆಂಡರ್ (Rev. Dr. Pfander) ಕೂಡ ಸಾಕ್ಷ್ಯ ನೀಡಿದ್ದಾರೆ. ಅವರು ತಮ್ಮ **'ಮೀಝಾನುಲ್ ಹಖ್'** ಎಂಬ ಪುಸ್ತಕದಲ್ಲಿ, ಆ ಕಾಲದ ಎಲ್ಲ ಜಾತಿಗಳ ಪೈಕಿ ಬಹಳ ಹೆಚ್ಚು ಕೆಟ್ಟಿದ್ದವರು ಕ್ರೈಸ್ತರಾಗಿದ್ದರೆಂದೂ

ಅವರ ಅಧಾರ್ಮಿಕ ಜೀವನವೂ ನೀಚವಾದ ದುನರ್ಡತೆಗಳೂ ಕ್ರೈಸ್ತ ಧರ್ಮಕ್ಕೆ ಕಳಂಕಕಾರಿಯೂ ಅಪಮಾನಹೇತುವೂ ಆದ ರೀತಿಯಲ್ಲಿತ್ತೆಂದೂ ಬರೆದಿದ್ದರು.

ಪವಿತ್ರ ಖುರ್‌ಆನ್ ಸ್ವತಃ ಅದರ ಅವತೀರ್ಣದ ಆವಶ್ಯಕತೆಯ ಕುರಿತು ಹೀಗೆ ವ್ಯಕ್ತಪಡಿಸುತ್ತದೆ: "**ಝಹರಲ್ ಫಸಾದು ಫಿಲ್ ಬರ್‍ರಿ ವಲ್ ಬಹ್‌ರಿ**" ಎಂದರೆ, ನೆಲದಲ್ಲಿಯೂ ಸಮುದ್ರದಲ್ಲಿಯೂ ಒಂದೇ ಪ್ರಕಾರ ಅಧರ್ಮವು ವ್ಯಾಪಕವಾಗಿದೆ **(30;42).** ಈ ವಾಕ್ಯದಿಂದ, ಕಿರಾತಾವಸ್ಥೆಯಲ್ಲಿರುವ ಜಾತಿಯೂ ಅದೇ ರೀತಿ ಸುಸಂಸ್ಕೃತರೆಂದು ಸ್ವಯಂ ಅಭಿಮಾನಿಸುವ ವರ್ಗವೂ ಆ ಕಾಲದಲ್ಲಿ ಕೆಟ್ಟವರಾಗಿದ್ದರೆಂದು ತಿಳಿದುಬರುತ್ತದೆ.

ಈ ಸಾಕ್ಷ್ಯಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದ ಜನಾಂಗಗಳು, ಅವರು ಪೌರ್ವಾತ್ಯರಾಗಿರಲಿ, ಪಾಶ್ಚಾತ್ಯರಾಗಿರಲಿ, ಆರ್ಯಾವರ್ತದವರಾಗಿರಲಿ, ಅರೇಬಿಯಾದ ಮರುಭೂಮಿ ವಾಸಿಗಳಾಗಿರಲಿ, ದ್ವೀಪವಾಸಿಗಳಾಗಿರಲಿ, ಎಲ್ಲರೂ ಧಾರ್ಮಿಕ ನೆಲೆಯಲ್ಲಿ ಅಧಃಪತಿಸಿದ್ದರೆಂದೂ ಅವರೆಲ್ಲರಿಗೂ ದೇವನೊಂದಿಗೆ ಸಂಬಂಧ ನಷ್ಟವಾಗಿತ್ತೆಂದೂ ಆಗಿದೆ. ಹೀಗೆ ಅಂದು ಅಧರ್ಮವು ಭೂಮುಖವನ್ನು ಅಪವಿತ್ರಗೊಳಿಸಿತ್ತು. ಅಂಧಕಾರಾವೃತವಾದ ಆ ಕಾಲಘಟ್ಟವು ಖಂಡಿತವಾಗಿಯೂ ಓರ್ವ ಮಹನೀಯ ಪ್ರವಾದಿಯು ಆವಿರ್ಭವಿಸಬೇಕಾದ ಸರಿಯಾದ ಕಾಲ ಮತ್ತು ಸಮಯವಾಗಿತ್ತೆಂಬುದು ಚಿಂತಿಸುವ ಯಾರೊಬ್ಬನಿಗೂ ಮನದಟ್ಟಾಗಲು ಸಾಧ್ಯವಿರುವ ಸಂಗತಿಯಲ್ಲವೇ?

## ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಉಂಟುಮಾಡಿದ ಪರಿವರ್ತನೆ

ಇನ್ನು, ಈ ಪ್ರವಾದಿ ಬಂದು, ಲೋಕದಲ್ಲಿ ಸಾಧಿಸಿದ ಪರಿವರ್ತನೆ ಏನೆಂದು ಒಂದು ಪ್ರಶ್ನೆ ಉದ್ಭವಿಸಬಹುದು. ಈ ಪ್ರಶ್ನೆಗೆ ಉತ್ತರವಾಗಿ, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಲೋಕದಲ್ಲಿ ಉಂಟುಮಾಡಿದ ಮಹತ್ತರವಾದ ಆ ಪರಿವರ್ತನೆಯ ಕುರಿತು ಓರ್ವ ಮುಸ್ಲಿಮನಿಗೆ ದೃಷ್ಟಾಂತಗಳ ಸಹಿತ ಪ್ರಸ್ತಾಪಿಸಲು ಸಾಧ್ಯವಿರುವ ರೀತಿಯಲ್ಲಿ ಓರ್ವ ಕ್ರೈಸ್ತನಿಗೋ ಯಹೂದ್ಯನಿಗೋ ಆರ್ಯಧರ್ಮಿಗೋ ತನ್ನ ಪ್ರವಾದಿಯು ಸಾಧಿಸಿದ ಕಾರ್ಯಗಳ ಕುರಿತು ಹೇಳಲು

ಸಾಧ್ಯವಿಲ್ಲವೆಂದು ನಾನು ಧೈರ್ಯದಿಂದ ಹೇಳಬಲ್ಲೆನು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಥಮ ಉದ್ದೇಶ ಅರಬೀಯರನ್ನು ಉದ್ಧರಿಸುವುದಾಗಿತ್ತು. ಮನುಷ್ಯರೆಂದು ಹೇಳಲು ಕಷ್ಟವಾಗುವ ರೀತಿಯಲ್ಲಿ ಅವರಂದು ಬಹು ದುಷ್ಟರಾಗಿದ್ದರು. ಅವರೆಡೆಯಲ್ಲಿ ಕಾಣದ ಒಂದು ದುಷ್ಕರ್ಮವಾಗಲೀ ರೂಢಿಯಲ್ಲಿಲ್ಲದ ಒಂದು ದುರಾಚಾರವಾಗಲೀ ಇರಲಿಲ್ಲವೆಂದೇ ಹೇಳಬಹುದು. ಕಳ್ಳತನವೂ ದರೋಡೆಯೂ ಅವರ ಕಸುಬಾಗಿತ್ತು. ನಿರಪರಾಧಿಗಳನ್ನು ಕೊಲ್ಲುವುದೆಂಬುದು ಅವರಿಗೆ ಕ್ರಿಮಿಕೀಟಗಳನ್ನು ಕಾಲಿನಿಂದ ತುಳಿಯುವುದಕ್ಕೆ ತುಲ್ಯವಾಗಿತ್ತು. ಅವರು ಅನಾಥ ಮಕ್ಕಳನ್ನು ಕೊಂದು ಅವರ ಸೊತ್ತನ್ನು ಅಪಹರಿಸುತ್ತಿದ್ದರು. ಹೆಣ್ಮಕ್ಕಳನ್ನು ಜೀವಸಹಿತ ಅಗೆದು ಹೂಳುತ್ತಿದ್ದರು. ವ್ಯಭಿಚಾರದ ಕುರಿತು ಅವರು ಅಭಿಮಾನ ಹೊಂದಿದ್ದರು. ತಮ್ಮ ಕವನಗಳಲ್ಲಿ ಅಂತಹ ಅಶ್ಲೀಲ ಸಂಗತಿಗಳ ಕುರಿತು ಪ್ರಸ್ತಾಪಿಸುತ್ತಿದ್ದರು. ಒಂದು ಕುಟುಂಬ ಕೂಡ ಮದ್ಯಪಾನದಿಂದ ಹೊರತಿರದ ರೀತಿಯಲ್ಲಿ ಈ ಕೆಟ್ಟ ಚಾಳಿಯು ಅವರೆಡೆಯಲ್ಲಿ ಪ್ರಬಲವಾಗಿತ್ತು. ಜೂಜಾಟದಲ್ಲಿ ಅವರು ಎಲ್ಲ ದೇಶದವರಿಗಿಂತ ಮುಂದಿದ್ದರು. ಸಂಕ್ಷಿಪ್ತವಾಗಿ, ಅವರು ಮೃಗಗಳಿಗಿಂತ ನಿಕೃಷ್ಟರಾಗಿದ್ದರು. ಮಾತ್ರವಲ್ಲ, ಸರ್ಪಗಳಿಗೂ ತೋಳಗಳಿಗೂ ಕೂಡ ನಾಚಿಕೆಯಾಗುವ ರೀತಿಯಲ್ಲಿ ಅವರ ಜೀವನ ಬಹಳ ದುಷ್ಟವಾಗಿತ್ತು.

ಹೀಗಿದ್ದ ಅರಬೀಯರನ್ನು ಸುಧಾರಿಸಲು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಿದ್ಧರಾದರು. ಅವರು ತಮ್ಮ ಆಧ್ಯಾತ್ಮಿಕ ಪ್ರಭಾವದಿಂದ ಅವರಿಗೆ ಸಂಸ್ಕಾರವನ್ನೂ ನವಚೈತನ್ಯವನ್ನೂ ಪ್ರದಾನಮಾಡಿ ಅವರನ್ನು ಪರಿಶುದ್ಧರನ್ನಾಗಿ ಮಾಡಲು ಪರಿಶ್ರಮಿಸಿದಾಗ, ಅಲ್ಪಕಾಲದೊಳಗೆ ಅವರಲ್ಲಿ ಮಹತ್ತರವಾದೊಂದು ಪರಿವರ್ತನೆಯುಂಟಾಯಿತು. ಅವರು ಮೃಗಸಮಾನವಾದ ಸ್ಥಿತಿಯಿಂದ ಮನುಷ್ಯರಾಗಿ ಪರಿವರ್ತಿತರಾಗಿ, ನಂತರ ಸಭ್ಯರಾಗಿಯೂ ದೇವಭಕ್ತರಾಗಿಯೂ ಮಾರ್ಪಟ್ಟರು. ಕಡೆಗೆ ದೇವಮಾರ್ಗದಲ್ಲಿ ಎಲ್ಲ ರೀತಿಯ ಹಿಂಸೆಗಳನ್ನು ಸಹಿಸಲು ಪ್ರಾಪ್ತರಾಗುವಷ್ಟು ದೇವನೊಡನೆಯಿರುವ ಪ್ರೀತಿಯಲ್ಲಿ ಮಗ್ನರಾದರು. ನಾನಾ ರೀತಿಯ ಯಾತನೆಗಳಿಗೆ ಅವರು ಗುರಿಯಾದರು. ಚಾಟಿಯಿಂದ ಅತಿ ದಾರುಣವಾದ ರೀತಿಯಲ್ಲಿ ಅವರು ಪ್ರಹರಿಸಲ್ಪಟ್ಟರು; ಸುಡುವ ಮರಳಿನಲ್ಲಿ ಅವರು ಎಳೆದೊಯ್ಯಲ್ಪಟ್ಟರು; ಬಂಧಿಸಲ್ಪಟ್ಟರು; ಸಾಯಲಿಕ್ಕಾಗುವ ಮಟ್ಟಿನಲ್ಲಿ

ಹೊಟ್ಟೆಗಿಲ್ಲದವರಾದರು. ಆದರೆ ಇಂತಹ ಯಾವ ಆಪತ್ಕಾಲದಲ್ಲೂ ಅವರು ವಿಚಲಿತರಾಗದೆ ದೇವ ಮಾರ್ಗದಲ್ಲಿ ಮುನ್ನಡೆದುಕೊಂಡು ಹೋದರು. ಹಲವರ ಮಕ್ಕಳು ಅವರ ಕಣ್ಮುಂದೆ ವಧಿಸಲ್ಪಟ್ಟರು; ಅನೇಕ ಶಿರಗಳು ಅವರ ಅಕ್ಕರೆಯ ಸಂತಾನಗಳ ಕಣ್ಣೆದುರಿಗೆಯೇ ಹಾರಿಸಲ್ಪಟ್ಟವು. ಹೀಗೆ ಕಠಿಣ ಯಾತನೆಗಳಿಂದ ಪೀಡಿತರಾದಾಗ, ಅವರು ಅಚಂಚಲಿತರಾಗಿ ತಮ್ಮ ಜೀವವನ್ನು ದೇವಮಾರ್ಗದಲ್ಲಿ ಬಲಿಯರ್ಪಿಸಿದರು. ಈ ಸಂಭವಗಳ ಕುರಿತು ನೆನಸುವಾಗ ಕಣ್ಣುಗಳು ಆಶ್ರುವಿನಿಂದ ತುಂಬಿಬರುತ್ತವೆ. ಅವರು ಹೀಗೆ ಇಸ್ಲಾಮಿನೆಡೆಗೆ ಆಕರ್ಷಿತರಾಗಲಿಕ್ಕೆ ಅವರ ಹೃದಯಗಳನ್ನು ಅಷ್ಟೆಲ್ಲ ಸ್ವಾಧೀನಪಡಿಸಿದ ಶಕ್ತಿ ಯಾವುದಾಗಿತ್ತು? ಮಕ್ಕದ ರಸ್ತೆ ಬೀದಿಗಳಲ್ಲಿ ಏಕಾಂಗಿಯಾಗಿ ಸಂಚರಿಸುತ್ತಿದ್ದ ಆ ನಿಸ್ಸಹಾಯಕನಾದ ವ್ಯಕ್ತಿಯ ಚರಣಗಳಲ್ಲಿ ಸ್ವಯಂ ಅರ್ಪಿತರಾಗಲು ಪ್ರೇರಿತರಾಗುವಂತೆ ಆಶ್ಚರ್ಯಕರವಾದ ಪರಿವರ್ತನೆ ಅವರಲ್ಲಿ ಉಂಟುಮಾಡಿದ ಆ ಶಕ್ತಿ ವಿಶೇಷವು ಯಾವುದಾಗಿತ್ತು? ಅದು ಹಝ್ರತ್ ಮುಹಮ್ಮದ್ ಪೈಗಂಬರರಲ್ಲಿ(ಸ) ಪಸರಿಸಿದ್ದ ಆಧ್ಯಾತ್ಮಿಕ ಪ್ರಭಾವವೂ ದೈವಿಕ ಶಕ್ತಿಯೂ ಅಲ್ಲದೆ ಬೇರೇನೂ ಆಗಿರಲಿಲ್ಲ. ಹೌದು, ಅವರನ್ನು ಆ ಅಧಃಪತನದ ಮಾರ್ಗದಿಂದ ರಕ್ಷಿಸಿ ಆಧ್ಯಾತ್ಮಿಕ ಔನ್ನತ್ಯಕ್ಕೆ ಎತ್ತಿಕೊಂಡು ಹೋದದ್ದು ಆಧ್ಯಾತ್ಮಿಕವಾದೊಂದು ಕಾಂತಶಕ್ತಿಯೇ ಆಗಿತ್ತು.

ಇಸ್ಲಾಂ ಧರ್ಮ ಸ್ವೀಕರಿಸುವ ಮೊದಲು ಅವರಲ್ಲಿ ಹೆಚ್ಚಿನವರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬದ್ಧವೈರಿಗಳೂ ರಕ್ತಪಿಪಾಸಿಗಳೂ ಆಗಿದ್ದರೆಂಬುದು ವಿಸ್ಮಯಕರವಾದ ಸಂಗತಿಯಾಗಿದೆ. ದೀನ ದರಿದ್ರನಾದ, ಒಬ್ಬಂಟಿಗನಾದ ಓರ್ವ ವ್ಯಕ್ತಿ ಅವರ ಹೃದಯಗಳಿಂದ ಹಗೆತನ ಮತ್ತು ಶತ್ರು ಭಾವನೆಯನ್ನು ಹೋಗಲಾಡಿಸಿ ಅವರನ್ನು ತಮ್ಮೆಡೆಗೆ ಆಕರ್ಷಿಸಿ, ಅವರು ತಮ್ಮ ಬೆಲೆಬಾಳುವ ವಸ್ತ್ರಾದಿಗಳನ್ನು ಕಿತ್ತೊಗೆದು ಒರಟು ಉಡುಪುಗಳನ್ನು ಧರಿಸಿಕೊಂಡು ಸೇವಾಮನೋಭಾವದಿಂದ ತನ್ನ ಮುಂದೆ ಹಾಜರಾಗುವಂತಹ ರೀತಿಯಲ್ಲಿ ಅವರನ್ನು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸ್ವಾಧೀನಪಡಿಸಿಕೊಂಡರೆಂಬುದು ಅತ್ಯದ್ಭುತಕರವಾದ ಒಂದು ಸಂಗತಿಯಾಗಿದೆ. ಇದಕ್ಕಿಂತ ಮಿಗಿಲಾದ ಒಂದು ಅದ್ಭುತ ಪವಾಡ ಬೇರೊಂದಿದೆ ಎಂದು ನಾನು ಭಾವಿಸುವುದಿಲ್ಲ.

## ಇಸ್ಲಾಂ ಪ್ರಚಾರಗೊಂಡುದು ಹೇಗೆ?

ಇಸ್ಲಾಂ, ಧಾರ್ಮಿಕ ಯುದ್ಧ ಮಾಡಲು ಅದರ ಅನುಯಾಯಿಗಳನ್ನು ಆಜ್ಞಾಪಿಸುತ್ತದೆ ಎಂದು ವಿಚಾರಶೂನ್ಯರಾದ ಕೆಲವರು ಆರೋಪಿಸುತ್ತಾರೆ. ಈ ಜನರೆಲ್ಲ ಖಡ್ಗದ ಬಲದಿಂದ ಇಸ್ಲಾಮಿಗೆ ಪರಿವರ್ತಿತರಾದವರೆಂದು ಅವರು ಭಾವಿಸುತ್ತಾರೆ. ಇದೆಷ್ಟು ದುಃಖಕರ! ಇಸ್ಲಾಮಿಗೆದುರಾಗಿ ಅನ್ಯಾಯದಿಂದ ವರ್ತಿಸುವುದರಲ್ಲೂ ಅದರ ಸತ್ಯತೆಯನ್ನು ಮುಚ್ಚಿಡುವುದರಲ್ಲೂ ಇವರು ಮಿತಿ ಮೀರಿದ್ದಾರೆ. ವಾಸ್ತವಾಂಶಕ್ಕೆದುರಾಗಿ ಹೀಗೆ ಕಣ್ಣು ಮುಚ್ಚಿಕೊಂಡಿರಲಿಕ್ಕೆ ಇವರಿಗೆ ಏನಾಗಿದೆ! ಪರಿಶುದ್ಧ ಮುಹಮ್ಮದ್ ಪೈಗಂಬರರು(ಸ) ಅರೇಬಿಯಾದಲ್ಲಿ ಅವಿರ್ಭವಿಸಿದ್ದು ಒಬ್ಬ ಸಾಮ್ರಾಟನ ನೆಲೆಯಲ್ಲಲ್ಲ. ಅವರಿಗೆ ರಾಜೋಜಿತ ಶಕ್ತಿಯೂ ಪ್ರತಾಪವೂ ಇದ್ದುದರಿಂದ ಜನರು ಜೀವರಕ್ಷಣಾರ್ಥ ಅವರ ಪತಾಕೆಯ ಕೆಳಗೆ ಶರಣಾಗತರಾದರೆಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಏಕೆಂದರೆ, ಅವರು ಪ್ರವಾದಿತ್ವವನ್ನು ವಾದಿಸಿದ್ದೂ ಏಕದೇವ ಸಿದ್ಧಾಂತವನ್ನು ಪ್ರಬೋಧಿಸಲು ಪ್ರಾರಂಭಿದ್ದೂ ಅವರು ದರಿದ್ರರೂ ನಿಸ್ಸಹಾಯಕರೂ ಆಗಿದ್ದ ಸ್ಥಿತಿಯಲ್ಲಾಗಿತ್ತು. ಆಗ, ಅವರನ್ನು ನಂಬಲು ಜನರನ್ನು ನಿರ್ಬಂಧಿಸಲಿಕ್ಕೆ ಅವರ ವಶದಲ್ಲಿ ಯಾವ ಭಯಂಕರ ಖಡ್ಗವಿತ್ತು? ಜನರು ತಮ್ಮ ಸ್ವಂತ ಇಚ್ಛೆಯಿಂದ ನಂಬಿರದಿದ್ದರೆ ಅವರನ್ನು ನಂಬಿಸಲು ಯಾವ ರಾಜನ ಸೇನೆಯನ್ನು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಕರೆದು ತರಿಸಿದ್ದು? ಯಾರ ಸಹಾಯವನ್ನು ಆ ಪ್ರವಾದಿ ಯಾಚಿಸಿದ್ದು?

ಪ್ರಿಯ ಸತ್ಯಾನ್ವೇಷಿಗಳೇ, ಇವೆಲ್ಲ ಇಸ್ಲಾಮಿನ ಕಠಿಣ ಶತ್ರುಗಳ ಸುಳ್ಳಾರೋಪಗಳು ಮಾತ್ರವಾಗಿವೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಜನಿಸಿ ಕೆಲವೇ ದಿನಗಳಲ್ಲಿ ಅವರ ತಂದೆಯೂ ಚಿಕ್ಕವಯಸ್ಸಿನಲ್ಲಿ ತಾಯಿಯೂ ಮೃತಪಟ್ಟಿದ್ದರಿಂದ ಅನಾಥರಾದ ಓರ್ವ ವ್ಯಕ್ತಿಯಾಗಿದ್ದರು ಎಂಬುದು ಚರಿತ್ರೆಯೆಡೆಗೆ ಕಣ್ಣೋಡಿಸುವ ಯಾರಿಗೂ ಪ್ರಯಾಸವಿಲ್ಲದೆ ಅರಿಯಬಹುದು. ತನ್ನ ಆಸರೆಗಾಗಿ ದೈವಿಕಹಸ್ತ ಮಾತ್ರವಿದ್ದ ಈ ಪುಣ್ಯ ಬಾಲಕ ಪರಮಾತ್ಮನ ರಕ್ಷಣೆಯ ನೆರಳಲ್ಲಿ ಬೆಳೆದನು. ಆ ಅನಾಥಾವಸ್ಥೆಯಲ್ಲಿ ಅವರು ಅನ್ಯರ ಆಡುಗಳನ್ನು ಮೇಯಿಸುವ ಕೆಲಸ ಕೂಡ ಮಾಡಬೇಕಾಗಿ ಬಂದಿತ್ತು. ಆಗ ಅವರಿಗೆ ಸರ್ವಾಧಿನಾಥನಾದ ಪರಮಾತ್ಮನಲ್ಲದೆ

ರಕ್ಷಕನಾಗಿ ಬೇರೆ ಯಾರೂ ಇರಲಿಲ್ಲ. ಇಪ್ಪತ್ತೈದು ವರ್ಷ ಪ್ರಾಯವಾದಾಗಲೂ ಆ ಮಹಾಪುರುಷನಿಗೆ ತನ್ನ ಪಿತೃಸಹೋದರರಲ್ಲಿ ಯಾರೂ ತನ್ನ ಪುತ್ರಿಯನ್ನು ವಿವಾಹ ಮಾಡಿಕೊಡಲು ತಯಾರಿರಲಿಲ್ಲ. ಏಕೆಂದರೆ ಪ್ರತ್ಯಕ್ಷದಲ್ಲಿ ಅವರಿಗೆ ಒಂದು ಕುಟುಂಬವನ್ನು ಸಲಹುವ ಸಾಮರ್ಥ್ಯವಿರಲಿಲ್ಲ. ಅವರಿಗೆ ವಿದ್ಯಾರ್ಜನೆಗೆ ಸಂದರ್ಭ ಲಭಿಸಿರಲಿಲ್ಲ. ಯಾವುದೇ ವೃತ್ತಿ ಶಿಕ್ಷಣವೂ ಅವರಿಗೆ ಸಿದ್ಧಿಸಿರಲಿಲ್ಲ. ಹಾಗೆ ಅವರಿಗೆ ನಲ್ವತ್ತು ವರ್ಷ ಪ್ರಾಯವಾದಾಗ ಒಮ್ಮೆ ಅವರ ಪವಿತ್ರ ಮನಸ್ಸು ಅತಿ ಶಕ್ತವಾಗಿ ದೇವನೆಡೆಗೆ ಸೆಳೆಯಲ್ಪಟ್ಟಿತು. ಮಕ್ಕದಿಂದ ಕೆಲವು ಮೈಲುಗಳಷ್ಟು ದೂರವಿರುವ ಹಿರಾ ಪರ್ವತ ಗುಹೆಯಲ್ಲಿ ಏಕಾಂಗಿಯಾಗಿದ್ದುಕೊಂಡು ಅವರು ಪರಮಾತ್ಮನನ್ನು ಧ್ಯಾನಿಸುತ್ತಿದ್ದರು. ಒಂದು ದಿನ ಅವರು ಅಲ್ಲಿ ಧ್ಯಾನನಿಷ್ಠರಾಗಿದ್ದಾಗ ಅವರಿಗೆ ಪರಮಾತ್ಮನು ತನ್ನ ಪ್ರಕಟನೆ ಮತ್ತು ದಿವ್ಯವಾಣಿಯಿಂದ ಅನುಗ್ರಹಿಸಿದನು. ಲೋಕವು ಪರಮಾತ್ಮನನ್ನು ಮರೆತು, ಭೂಮಿ ಪಾಪದಿಂದ ತುಂಬಿದೆ. ಆದ್ದರಿಂದ ದೈವಿಕ ಶಿಕ್ಷೆ ಬರುವುದಕ್ಕೆ ಮುಂಚಿತವಾಗಿ ಜನರು ದೇವನ ಕಡೆಗೆ ತಿರುಗಬೇಕು ಎಂಬ ಮುನ್ನೆಚ್ಚರಿಕೆ ನೀಡಲು ನಿನ್ನನ್ನು ನಾನು ಸಂದೇಶವಾಹಕನ್ನಾಗಿ ನಿಯೋಜಿಸಿ ಕಳುಹಿಸುತ್ತಿದ್ದೇನೆ ಎಂಬುದಾಗಿ ದಿವ್ಯಾಜ್ಞೆಯಾಯಿತು. ಈ ಆಜ್ಞೆಯಾದಾಗ, ತಾನು ಅಕ್ಷರಸ್ಥನಲ್ಲದ ಕಾರಣ ಭೀತನಾಗಿ, ತಾನು ಏನೂ ಓದಿ ಕಲಿತವನಲ್ಲವೆಂದು ಅವರು ವ್ಯಕ್ತಪಡಿಸಿದರು. ಆಗ ಸರ್ವಜ್ಞನಾದ ಪರಮಾತ್ಮನು ಅವರ ಹೃದಯದಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ತುಂಬಿಸಿದನು; ತನ್ನ ಪ್ರಕಟನೆ ಹಾಗೂ ಬೋಧನೆಯಿಂದ ಅವರ ಹೃದಯವನ್ನು ಪ್ರಕಾಶಪೂರ್ಣವನ್ನಾಗಿ ಮಾಡಿದನು. ಬಡವರೂ ವಿನೀತರೂ ಅವರ ಆಧ್ಯಾತ್ಮಿಕ ಪರಿಶುದ್ಧ ಶಕ್ತಿಯಿಂದ ಆಕರ್ಷಿತರಾಗಿ ಅವರ ಅನುಸರಣೆ ಮತ್ತು ವಿಧೇಯತೆಯ ವಲಯದಲ್ಲಿ ಸೇರಲು ತೊಡಗಿದರು. ಊರಿನ ಪ್ರಬಲ ವ್ಯಕ್ತಿಗಳು ಮತ್ತು ಹಿರಿಯರು ವಿರೋಧಿಸಲು ಸೊಂಟಕಟ್ಟಿದರು. ಹಝ್ರತ್ ಪೈಗಂಬರರನ್ನು[ಸ] ವಧಿಸಲು ಸಹ ಅವರು ಸನ್ನದ್ಧರಾದರು. ಅವರ ಅನುಚರರಲ್ಲಿ ಅನೇಕ ಸ್ತ್ರೀ ಪುರುಷರನ್ನು ಆ ಶತ್ರುಗಳು ಚಿತ್ರಹಿಂಸೆ ಕೊಟ್ಟು ಕೊಂದರು. ಕಡೆಗೆ ಹಝ್ರತ್ ಪೈಗಂಬರರನ್ನು[ಸ] ವಧಿಸಲು ಅವರ ಭವನವನ್ನು ಸುತ್ತುವರಿದರು. ಆದರೆ ಪರಮಾತ್ಮನು ರಕ್ಷಿಸಲು ಬಯಸಿದವರನ್ನು ಕೊಲ್ಲಲು ಯಾರಿಗೆ ಸಾಧ್ಯ? ಶತ್ರುಗಳ ಉದ್ದೇಶವನ್ನೂ ಗೂಢಾಲೋಚನೆಯನ್ನೂ ಪರಮಾತ್ಮನು ತನ್ನ ಪ್ರವಾದಿಗೆ ತಿಳಿಸಿಕೊಟ್ಟು ಊರನ್ನು ಬಿಟ್ಟು ಹೋಗಲು

ಅವರಿಗೆ ಆಜ್ಞಾಪಿಸಿ, ಸದಾ ತನ್ನ ಸಹಾಯ ಅವರಿಗಿದೆಯೆಂದು ವಾಗ್ದಾನ ಮಾಡಿದನು. ಹಾಗೆ ಹಝ್ರತ್ ಪೈಗಂಬರ್(ಸ) ತಮ್ಮ ಸ್ನೇಹಿತ ಹಝ್ರತ್ ಅಬೂಬಕರ್‌ರನ್ನು ಒಡಗೂಡಿ ಊರನ್ನು ಬಿಟ್ಟು ಹೊರಟು ಇಬ್ಬರೂ **'ಸೌರ್'** ಗುಹೆಯಲ್ಲಿ ಅಡಗಿ ಅದರಲ್ಲಿ ಮೂರು ರಾತ್ರಿಗಳನ್ನು ಕಳೆದರು. ಹಝ್ರತ್ ಪೈಗಂಬರರನ್ನು(ಸ) ಹಿಡಿಯಲು ಹೊರಟ ಶತ್ರುಗಳು ಒಬ್ಬ ಮಾರ್ಗದರ್ಶಕನ ಸಹಾಯದಿಂದ ಕಾಲಿನ ಹೆಜ್ಜೆಯ ಗುರುತುಗಳನ್ನು ಹಿಂಬಾಲಿಸಿ ಗುಹೆಯ ಹತ್ತಿರಕ್ಕೆ ತಲುಪಿದರು. ಅಲ್ಲಿಯ ತನಕ ಕಾಲಿನ ಹೆಜ್ಜೆಗಳನ್ನು ಕಂಡುಹಿಡಿದ ಮಾರ್ಗದರ್ಶಕನು ಹಝ್ರತ್ ಪೈಗಂಬರ್(ಸ) ಗುಹೆಯಲ್ಲಿ ಇರಬೇಕೆಂದೂ ಅದರಾಚೆ ಕಾಲಡಿ ಗುರುತುಗಳು ಕಾಣದುದರಿಂದ ಅವರು ಅಲ್ಲಿಂದ ಮುಂದಕ್ಕೆ ಹೋಗಿದ್ದರೆ ಆಕಾಶದೆಡೆಗೆ ಹೋಗಿರಲಿಕ್ಕೆ ಸಾಧ್ಯವೆಂದೂ ಒತ್ತಿ ಹೇಳಿದನು. ಆದರೆ ಪರಮಾತ್ಮನ ಅದ್ಭುತ ಶಕ್ತಿಯನ್ನು ಸೀಮಿತಗೊಳಿಸಲು ಯಾರಿಗೆ ಸಾಧ್ಯ? ಒಂದು ರಾತ್ರಿಯೊಳಗೆ ಜೇಡ ತನ್ನ ಬಲೆಯಿಂದ ಆ ಗುಹೆಯ ಪ್ರವೇಶ ದ್ವಾರವನ್ನು ಮುಚ್ಚಿಬಿಟ್ಟಿತ್ತು; ಒಂದು ಪಾರಿವಾಳ ಗುಹೆಮುಖದಲ್ಲಿ ಗೂಡುಕಟ್ಟಿ ಅದರಲ್ಲಿ ಮೊಟ್ಟೆಯನ್ನಿಟ್ಟಿತ್ತು. ಗುಹೆಯೊಳಗೆ ಪ್ರವೇಶಿಸಿ ಪರಿಶೋಧಿಸಲು ಮಾರ್ಗದರ್ಶಕನು ಸಂಗಡಿಗರನ್ನು ಪ್ರೇರೇಪಿಸಿದಾಗ, ಅವರಲ್ಲಿ ಒಬ್ಬ ವೃದ್ಧನು ಹೀಗೆಂದನು; "ಈ ಮಾರ್ಗದರ್ಶಕನು ಹುಚ್ಚನಾಗಿ ಬಿಟ್ಟಿದ್ದಾನೆ; ಮುಹಮ್ಮದ್ ಜನಿಸುವ ಮೊದಲಿನಿಂದಲೇ ಈ ಗುಹೆಮುಖದಲ್ಲಿ ಈ ಜೇಡರ ಬಲೆಯನ್ನು ನೋಡುತ್ತಿದ್ದೇನೆ." ಇದನ್ನು ಕೇಳಿದಾಗ ಜನರೆಲ್ಲ ಅಲ್ಲಿಂದ ಚದುರಿದರು. ಯಾರೂ ಗುಹೆಯೊಳಗೆ ಪ್ರವೇಶಿಸಿ ಪರಿಶೋಧಿಸಲು ತಯಾರಾಗಲಿಲ್ಲ.

ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ರಹಸ್ಯವಾಗಿ ಹೊರಟು ಮದೀನದಲ್ಲಿ ಅಭಯವನ್ನು ಪಡೆದರು. ಅಲ್ಲಿ ಹೆಚ್ಚಿನವರು ಅವರನ್ನು ಸ್ವೀಕರಿಸಿದರು. ಇದು ಮಕ್ಕ ನಿವಾಸಿಗಳನ್ನು ಹೆಚ್ಚು ರೋಷಾಕುಲರನ್ನಾಗಿ ಮಾಡಿತು. ತಮ್ಮ ಕೊಳ್ಳೆ ಕೈಬಿಟ್ಟು ಹೋದುದಕ್ಕೆ ಅವರು ದುಃಖಿಸಿದರು. ಅಂದು ಮೊದಲ್ಗೊಂಡು ಹಝ್ರತ್ ಪೈಗಂಬರರನ್ನು(ಸ) ವಧಿಸಲು ಅವರು ರಾತ್ರಿ – ಹಗಲೆನ್ನದೆ ನಾನಾ ರೀತಿಯಲ್ಲಿ ಪ್ರಯತ್ನಿಸಿದರು. ಆ ಮಹಾಪುರುಷರನ್ನು ನಂಬಿದ ಮಕ್ಕ ನಿವಾಸಿಗಳಾದ ಕೆಲವರು ಸ್ವಂತ ಮನೆಮಾರುಗಳನ್ನು ಬಿಟ್ಟು ಹೋಗಿ ಬೇರೆ ದೇಶಗಳಲ್ಲಿ ಅಭಯ ಪಡೆದರು. ಕೆಲವರು ಅಬಿಸೀನಿಯಾ ರಾಜರ ಆಡಳಿತದಲ್ಲಿ

ಶರಣಾರ್ಥಿಗಳಾದರು. ಹೊರಗೆ ಎಲ್ಲೂ ಹೋಗಲು ಸಾಧ್ಯವಾಗದ ದರಿದ್ರರು ಮಕ್ಕದಲ್ಲೇ ಉಳಿಯಲು ನಿರ್ಬಂಧಿತರಾದರು. ಅಲ್ಲಿ ಅವರು ಕಠಿಣ ಯಾತನೆಗಳಿಗೆ ಗುರಿಯಾದರು. ಸದಾ ಸಂಕಷ್ಟಕ್ಕೊಳಗಾದ ಆ ನಿಸ್ಸಹಾಯಕರ ವಿಲಾಪನೆಯ ಕುರಿತು ಪರಿಶುದ್ಧ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ.

ಮಕ್ಕದ ಅವಿಶ್ವಾಸಿಗಳ ದೌರ್ಜನ್ಯಗಳು ಎಲ್ಲ ಸೀಮೆಗಳನ್ನು ಮೀರಿದವು. ಅವರು ಬಡ ಸ್ತ್ರೀಯರನ್ನೂ ಅನಾಥ ಮಕ್ಕಳನ್ನೂ ವಧಿಸಲು ತೊಡಗಿದರು. ಕೆಲ ಸ್ತ್ರೀಯರನ್ನು ಅತಿ ದಾರುಣವಾದ ರೀತಿಯಲ್ಲಿ ಕೊಲೆ ಮಾಡಿದರು. ಅವರ ಕಾಲುಗಳನ್ನು ಎರಡು ಒಂಟೆಗಳಿಗೆ ಬಿಗಿಯಾಗಿ ಕಟ್ಟಿ ಒಂಟೆಗಳನ್ನು ಎದುರು ಬದಿರು ದಿಕ್ಕುಗಳಿಗೆ ಓಡಿಸಿ ಅವರನ್ನು ಎರಡು ಸೀಳುಗಳನ್ನಾಗಿ ಮಾಡಿದರು.

ಹೀಗೆ ಅವಿಶ್ವಾಸಿಗಳಾದ ಖುರೈಷಿಗಳ ಪೀಡೆ ಮತ್ತು ಹಿಂಸೆಗಳು ಅತ್ಯಂತ ನಿಷ್ಠುರವೂ ಕ್ರೂರವೂ ಆದಾಗ ಕರುಣಾನಿಧಿಯಾದ ಪರಮಾತ್ಮನು ತನ್ನ ಭಕ್ತಜನರ ಮೇಲೆ ದಯೆದೋರಿದನು. ಅವನು ಅವರ ವಿಲಾಪನೆಗಳನ್ನು ಕೇಳಿ ಅವರಿಗೆ ಆತ್ಮರಕ್ಷಣಾರ್ಥ ದೌರ್ಜನ್ಯಗಾರರ ಎದುರಾಗಿ ಆಯುಧವೆತ್ತಲು ಅಪ್ಪಣೆ ಕೊಟ್ಟನು. ನಿರಪರಾಧಿಗಳನ್ನು ಖಡ್ಗದಿಂದ ನಾಶಮಾಡಲು ಹೊರಟವರು ಖಡ್ಗದಿಂದಲೇ ನಾಶಗೊಳ್ಳುವರೆಂದೂ ಆದರೆ ವಿಶ್ವಾಸಿಗಳು ಎಲ್ಲೆ ಮೀರಿ ವರ್ತಿಸಬಾರದೆಂದೂ ಅವರಿಗೆ ಆಜ್ಞಾಪಿಸಲಾಯಿತು. ಏಕೆಂದರೆ ಎಲ್ಲೆ ಮೀರಿದವರನ್ನು ಪರಮಾತ್ಮನು ಪ್ರೀತಿಸುವುದಿಲ್ಲ.

ಇದಾಗಿದೆ ಇಸ್ಲಾಮಿಕ ಜಿಹಾದಿನ ಅಥವಾ ಧಾರ್ಮಿಕ ಯುದ್ಧದ ವಾಸ್ತವಿಕತೆ. ಇದನ್ನು ಬಹಳ ತಪ್ಪಾಗಿ ಚಿತ್ರೀಕರಿಸಲಾಗಿದೆ. ಪರಮಾತ್ಮನು ಕ್ಷಮಾಶೀಲನೂ ಸಹನೆದೋರುವವನೂ ಆಗಿದ್ದರೂ ದೌರ್ಜನ್ಯಗಾರರ ಹಿಂಸೆ ಸೀಮಾತೀತವಾಗಿ ವರ್ಧಿಸುವಾಗ ಅವನು ಅವರನ್ನು ಶಿಕ್ಷಿಸದೆ ಬಿಡುವುದಿಲ್ಲ. ಅವರ ನಾಶಕ್ಕಾಗಿ ಅವನೇ ದಾರಿಯುಂಟುಮಾಡುತ್ತಾನೆ. ಇಸ್ಲಾಂ ಖಡ್ಗದಿಂದ ಪ್ರಚಾರಗೊಂಡ ಧರ್ಮವೆಂದು ಎದುರಾಳಿಗಳು ಎಲ್ಲಿಂದ ಗ್ರಹಿಸಿದರು? ಅವರೊಡನೆ ಇದನ್ನು ಯಾರು ಹೇಳಿದರು? ಈ ಆರೋಪವನ್ನು ಪವಿತ್ರ ಖುರ್‌ಆನ್ ನಿರಾಕರಿಸುತ್ತದೆ. ಅದು ಹೀಗೆನ್ನುತ್ತದೆ: "**ಲಾ ಇಕ್‌ರಾಹ ಫಿದ್ದೀನಿ**" ಎಂದರೆ "ಧರ್ಮದಲ್ಲಿ ಯಾವುದೇ ಬಲಪ್ರಯೋಗವಿಲ್ಲ." **(2:257)**. ಪರಮಾತ್ಮನು ತನ್ನ ಪವಿತ್ರ ಗ್ರಂಥದಲ್ಲಿ

ಹೀಗೆ ವ್ಯಕ್ತಪಡಿಸಿರುವಾಗ ಮತ್ತ್ಯಾರು ಬಲಪ್ರಯೋಗಿಸಲು ಆಜ್ಞಾಪಿಸಿದ್ದು? ದಬ್ಬಾಳಿಕೆಗೆ ಯಾವ ಸಾಧನಗಳಿದ್ದವು? ಬಲಪ್ರಯೋಗದ ಕಾರಣದಿಂದ ಧರ್ಮ ಪರಿವರ್ತನೆಗೊಂಡವರು ಇಂತಹ ಉನ್ನತ ಮಟ್ಟದ ನಿಷ್ಠೆ ಮತ್ತು ವಿಶ್ವಾಸ ಉಳ್ಳವರಾದರೇ? ಸಂಖ್ಯೆಯಲ್ಲಿ ಮುನ್ನೂರರಷ್ಟು ಮಾತ್ರವಿದ್ದ ಅವರು ಪ್ರತಿಫಲೇಚ್ಛೆಯಿಲ್ಲದೆ ಸಾವಿರಗಟ್ಟಲೆ ಶತ್ರುಗಳ ವಿರುದ್ಧ ಹೋರಾಡಿದರು. ಅವರ ಸಂಖ್ಯೆ ಸಾವಿರವಿದ್ದಾಗ ಲಕ್ಷಗಟ್ಟಲೆ ಶತ್ರುಗಳನ್ನು ಅವರು ಗೆದ್ದರು. ಸ್ವಧರ್ಮವನ್ನು ಶತ್ರುಗಳ ಆಕ್ರಮಣದಿಂದ ರಕ್ಷಿಸಲು ಅವರು ಕುರಿಗಳಂತೆ ತಮ್ಮ ಶಿರಗಳನ್ನು ಕೊಯ್ದುಕೊಳ್ಳಲು ಕಾಣಿಸಿಕೊಟ್ಟು ಸ್ವಂತ ರಕ್ತದಿಂದ ಇಸ್ಲಾಮಿನ ಸತ್ಯವನ್ನು ಸಾಕ್ಷೀಕರಿಸಿ ಏಕದೇವ ತತ್ವವನ್ನು ಸರ್ವತ್ರ ಪ್ರಚುರಪಡಿಸಲು ಸನ್ನದ್ಧರಾದರು. ದುರಂತಗಳನ್ನು ಸಹಿಸಿಕೊಂಡು ಅವರು ಒಂದು ಕಡೆ ಆಫ್ರಿಕದ ಮರಳಾರಣ್ಯದವರೆಗೆ ಇಸ್ಲಾಂ ಧರ್ಮವನ್ನು ಪ್ರಬೋಧಿಸಿದರು; ಮತ್ತೊಂದು ಕಡೆ ಅವರು ಕಷ್ಟಗಳನ್ನು ಸಹಿಸಿಕೊಂಡು ಚೀನಾ ದೇಶವನ್ನು ಸಹ ತಲುಪಿದರು. ರಣೋತ್ಸಾಹಕರಾದ ಭಟರಾಗಿ ಅಲ್ಲ; ಕೇವಲ ಇಸ್ಲಾಂ ಧರ್ಮವನ್ನು ಪ್ರಬೋಧಿಸಲು ನಿಸ್ಸಂಗರಾದ ದರವೇಶಿಗಳಾಗಿ (ಬೈರಾಗಿ, ಫಕೀರ) ಅವರು ಅಲ್ಲಿ ಪ್ರವೇಶಿಸಿದ್ದರು. ಅವರ ಅನುಗ್ರಹೀತ ಪ್ರಬೋಧನೆಯಿಂದ ಆ ದೇಶದಲ್ಲಿ ಕೋಟಿಗಟ್ಟಲೆ ಮುಸ್ಲಿಮರು ಉಂಟಾಗುವಂತೆ ಆಯಿತು. ನಂತರ ಅವರು ಒರಟು ವಸ್ತ್ರಧಾರಿಗಳಾದ ದರವೇಶಿಗಳಾಗಿ ನಮ್ಮ ಭಾರತದಲ್ಲೂ ಬಂದರು. ಅವರ ಉಪದೇಶದ ಫಲವಾಗಿ ಆರ್ಯಾವರ್ತದ ಜನ ಸಂಚಯಗಳಲ್ಲಿ ಅನೇಕರು ಇಸ್ಲಾಂ ಧರ್ಮವನ್ನು ಅವಲಂಬಿಸಿದರು. ಅನಂತರ ಅವರು ಪಶ್ಚಿಮ ದಿಕ್ಕಿನೆಡೆಗೆ ತಿರುಗಿ ಯುರೋಪಿನ ಸೀಮೆಯವರೆಗೆ ಏಕದೇವ ಸಿದ್ಧಾಂತವನ್ನು ಪ್ರಚಾರಪಡಿಸಿದರು.

ಸತ್ಯಪ್ರಿಯರೇ, ನೀವು ಪ್ರಾಮಾಣಿಕವಾಗಿ ಹೇಳಿರಿ. ಇವೆಲ್ಲ ಬಲವಂತ ಕಾರಣದಿಂದ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದವರ – ನಾಲಗೆಯಿಂದ ಮಾತ್ರ ವಿಶ್ವಾಸವನ್ನು ತೋರ್ಪಡಿಸಿ ಹೃದಯದಲ್ಲಿ ಅವಿಶ್ವಾಸವನ್ನು ತುಂಬಿರುವ ಕಪಟಿಗಳ ವರ್ತನೆಗಳೇ? ಖಂಡಿತವಾಗಿಯೂ ಅಲ್ಲ. ಇದು ಯಾರ ಹೃದಯ ಸತ್ಯವಿಶ್ವಾಸದ ದೀಪ್ತಿಯಿಂದ ಪ್ರಕಾಶಿತಗೊಂಡು ಅದರಲ್ಲಿ ಕೇವಲ ಸತ್ಯಸ್ವರೂಪನಾದ ಪರಮಾತ್ಮನ ಪ್ರೀತಿ ನೆಲೆಸಿದೆಯೋ ಅಂತಹವರ ಕರ್ಮ ವಿಲಾಸವಾಗಿದೆ.

## ಇಸ್ಲಾಮಿನ ಅಧ್ಯಾಪನೆ

ಇನ್ನು ನಾವು ಇಸ್ಲಾಮಿನ ಅಧ್ಯಾಪನೆಯೇನೆಂಬ ವಿಷಯದೆಡೆಗೆಯೇ ತಿರುಗೋಣ. ಇಸ್ಲಾಮಿನ ಮುಖ್ಯೋದ್ದೇಶ ಭೂಮಿಯಲ್ಲಿ ಪರಮಾತ್ಮನ ಏಕತ್ವವನ್ನೂ ಅವನ ಮಹಿಮೆಯನ್ನೂ ಸ್ಥಾಪಿಸಿ, ಬಹುದೇವಾರಾಧನೆಯನ್ನು ಸರ್ವಥಾ ಒಪ್ಪದೆ, ವಿವಿಧ ಜಾತಿಗಳನ್ನೂ ವಿಭಿನ್ನ ಪಕ್ಷಗಳನ್ನೂ ಒಂದೇ ಆದರ್ಶದ ಕೆಳಗೆ ಸಂಘಟಿಸಿ ಏಕ ಸಮುದಾಯವನ್ನಾಗಿ ಮಾಡುವುದಾಗಿದೆ. ಹಿಂದಿನ ಎಲ್ಲ ಧರ್ಮಗಳ ಹಾಗೂ ಪ್ರವಾದಿಗಳ ಲಕ್ಷ್ಯ ಪ್ರತ್ಯೇಕ ಪ್ರತ್ಯೇಕ ಜಾತಿಯವರನ್ನೋ ರಾಜ್ಯದವರನ್ನೋ ಸುಧಾರಿಸುವುದು ಮಾತ್ರವಾಗಿತ್ತು. ಆ ಪ್ರವಾದಿಗಳು ಅವರ ಜನತೆಗಳಿಗೆ ಧಾರ್ಮಿಕ ಪಾಠಗಳನ್ನು ನೀಡಿದ್ದರೆ ಅವರ ಉದ್ದೇಶ ಆಯಾಯ ಜಾತಿಯವರನ್ನು ಮಾತ್ರ ಆ ತತ್ವ ಸಂಹಿತೆಗಳ ಮೂಲಕ ಧಾರ್ಮಿಕವಾಗಿ ಉದ್ಧರಿಸುವುದಾಗಿತ್ತು. ಉದಾಹರಣೆಗಾಗಿ, ಯೇಸುಕ್ರಿಸ್ತರು ಸ್ಪಷ್ಟವಾಗಿ ಪ್ರಬೋಧಿಸಿದ್ದು ತಮ್ಮ ದೌತ್ಯ ಇಸ್ರಾಈಲ್ ಗೋತ್ರಕ್ಕೆ ಮಾತ್ರವೆಂದಾಗಿದೆ. ಇಸ್ರಾಈಲ್ಯಳಲ್ಲದ ಓರ್ವ ಸ್ತ್ರೀ ಯೇಸುಕ್ರಿಸ್ತರನ್ನು ಸಮೀಪಿಸಿ, "ಸ್ವಾಮೀ, ನನಗೆ ಕರುಣೆ ತೋರಿಸು" ಎಂದು ವಿನೀತಳಾಗಿ ಅಪೇಕ್ಷಿಸಿದಾಗ, ತಾನು ಇಸ್ರಾಈಲ್ಯರಿಗಲ್ಲದೆ ಮತ್ತ್ಯಾರಿಗೂ ಕಳುಹಿಸಲ್ಪಡಲಿಲ್ಲವೆಂದು ಹೇಳಿ ಅವರು ಅವಳ ಬೇಡಿಕೆಯನ್ನು ನಿರಾಕರಿಸಿದರು. ಆ ಸ್ತ್ರೀ ಮತ್ತೂ ಬಿನ್ನವಿಸಿದಾಗ, **"**ಮಕ್ಕಳಿಗಿರುವ ರೊಟ್ಟಿಯನ್ನು ನಾಯಿಗಳಿಗೆ ಕೊಡುವುದು ಉಚಿತವಲ್ಲ**"** ಎಂದು ಉದಾಹರಿಸಿಕೊಂಡು ಅವರು ತಮ್ಮ ದೌತ್ಯವು ಇಸ್ರಾಈಲ್ಯರೇತರರಿಗಿಲ್ಲವೆಂಬುದನ್ನು ದೃಢೀಕರಿಸಿದರು. ಆದರೆ ನಮ್ಮ ಪೈಗಂಬರ್[ಸ] ತಾವು ಅರಬೀಯರಿಗಾಗಿ ಮಾತ್ರ ಆಗಮಿಸಿದ ಓರ್ವ ಪ್ರವಾದಿಯೆಂದು ಎಲ್ಲಿಯೂ ಹೇಳಿಲ್ಲ. ತದ್ವಿರುದ್ಧವಾಗಿ ತನ್ನ ದೌತ್ಯದ ವಿಶ್ವವ್ಯಾಪಕತೆಯನ್ನು ಘೋಷಿಸಿದ್ದರು. ಪವಿತ್ರ ಖುರ್‌ಆನ್ ಹೇಳುತ್ತದೆ: "**ಕುಲ್‌ಯಾ ಅಯ್ಯುಹನ್ನಾಸು ಇನ್ನೀ ರಸೂಲುಲ್ಲಾಹಿ ಇಲೈಕುಮ್ ಜಮೀಅ**" ಎಂದರೆ **"**ಪ್ರವಾದಿಯೇ ಹೇಳು: ಎಲೈ ಮನುಷ್ಯರೇ, ದಿಟವಾಗಿಯೂ ನಾನು ನಿಮ್ಮೆಲ್ಲರೆಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತನಾಗಿದ್ದೇನೆ**"** **(7:159)**. ಆದರೆ ಯೇಸುಕ್ರಿಸ್ತರು ತಮ್ಮ ಬಳಿ ಬಂದ ಸ್ತ್ರೀಯೊಡನೆ ನಿರಾಕರಿಸಿ ಹೇಳಿದ್ದು ಅವರ ಅಪರಾಧವೆಂದು ಗಣಿಸಲು ನಿರ್ವಾಹವಿಲ್ಲವೆಂಬುದು ನೆನಪಿನಲ್ಲಿಡಬೇಕಾಗಿದೆ. ಅಂದು ವಿಶ್ವೈಕ್ಯ ದೌತ್ಯದ

ಅಥವಾ ವಿಶ್ವವ್ಯಾಪಿ ಶಿಕ್ಷಣದ ಕಾಲವಾಗಿರಲಿಲ್ಲ. ಆದ್ದರಿಂದ ಅವರ ಪ್ರಬೋಧನೆ ಇಸ್ರಾಈಲ್ಯರೆಡೆಯಲ್ಲಿ ಮಾತ್ರವಾಗಿರಬೇಕೆಂದೂ ಇತರ ಜಾತಿಯವರೊಡನೆ ಅವರಿಗೆ ಯಾವ ಸಂಬಂಧವಾಗಲೀ ಇರಬಾರದೆಂದೂ ಯೇಸುಕ್ರಿಸ್ತರು ಪರಮಾತ್ಮನಿಂದ ಆಜ್ಞಾಪಿಸಲ್ಪಟ್ಟಿದ್ದರು. ನಾನು ಮೊದಲು ಹೇಳಿದ ಹಾಗೆ ಯೇಸುಕ್ರಿಸ್ತರ ಧಾರ್ಮಿಕ ಅಧ್ಯಾಪನೆ ಯಹೂದ್ಯರಿಗೆ ಮಾತ್ರವಾಗಿತ್ತು. 'ತೌರಾತಿ'ನಲ್ಲಿ (ಮೋಶೆಯ ನಿಯಮ ಸಂಹಿತೆಯಲ್ಲಿ) ಆದೇಶಿಸಲ್ಪಟ್ಟಿರುವುದು ಹಲ್ಲಿಗೆ ಬದಲಾಗಿ ಹಲ್ಲು, ಕಣ್ಣಿಗೆ ಬದಲಾಗಿ ಕಣ್ಣು, ಮೂಗಿಗೆ ಬದಲಾಗಿ ಮೂಗು ಎಂಬ ರೀತಿಯ ಶಿಕ್ಷಾನಿಯಮವಾಗಿತ್ತು. ಆ ಅಧ್ಯಾಪನೆಯ ಉದ್ದೇಶ ಯಹೂದ್ಯರೆಡೆಯಲ್ಲಿ ನೀತಿಯನ್ನೂ ನ್ಯಾಯವನ್ನೂ ನೆಲೆನಿಲ್ಲಿಸಲಿಕ್ಕೂ ಅತಿಕ್ರಮಣದಿಂದ ಅವರನ್ನು ತಡೆಯಲಿಕ್ಕೂ ಆಗಿತ್ತು. ಕಾರಣವೇನೆಂದರೆ, ನಾನ್ನೂರು ವರ್ಷಗಳಿಂದ ದಾಸ್ಯದಲ್ಲಿ ವಾಸವಾಗಿದ್ದುದರಿಂದ ಅವರು ಕಠಿಣ ಹೃದಯರೂ ನೀಚ ಮನಸ್ಕರೂ ಆಗಿ ಅಧಃಪತಿಸಿ, ಅನೀತಿಯೂ ಅಸಂಕೋಚತೆಯೂ ಅವರ ವಿಶೇಷ ಸ್ವಭಾವ ಚಿಹ್ನೆಗಳಾಗಿದ್ದವು. ಹಾಗೆಯೇ ಯೇಸುಕ್ರಿಸ್ತರ ಅವತಾರ ಕಾಲದಲ್ಲಿ, ಶಿಕ್ಷಾ ನಿಯಮಗಳಲ್ಲಿ ಯಹೂದ್ಯರ ಮಿತಿಮೀರಿದ ಕಠಿಣ ಸ್ವಭಾವಕ್ಕೆ ಪರಿಹಾರ ಕಾಣಲಿಕ್ಕಾಗಿ ಸೌಮ್ಯತೆಯನ್ನೂ ಕಾರುಣ್ಯವನ್ನೂ ಶಕ್ತವಾಗಿ ಉಪದೇಶಿಸುವ ಒಂದು ಸದಾಚಾರ ಧರ್ಮ ಅತ್ಯಾವಶ್ಯಕವಾಗಿತ್ತು. ಒಟ್ಟಾರೆ ಇಂಜೀಲಿನಲ್ಲಿ (ಸುವಾರ್ತೆಗಳಲ್ಲಿ) ಒಳಗೊಂಡ ಧರ್ಮೋಪದೇಶಗಳು ಯಹೂದ್ಯರನ್ನು ಮಾತ್ರ ಉದ್ದೇಶಿಸಿದ್ದಾಗಿವೆ; ಲೋಕವನ್ನೆಲ್ಲ ಸಂಬೋಧನೆ ಮಾಡಿದ್ದಲ್ಲ. ಏಕೆಂದರೆ ಯೇಸುಕ್ರಿಸ್ತರಿಗೆ ಇತರ ಜಾತಿಯವರೊಡನೆ ಏನೂ ಲಕ್ಷ್ಯವಿರಲಿಲ್ಲ.

ಯೇಸುಕ್ರಿಸ್ತರ ಉಪದೇಶಗಳು ಸಾರ್ವಲೌಕಿಕವಲ್ಲವೆಂದು ಮೇಲಿನ ವಿವರಣೆಯಿಂದ ತಿಳಿದಿರಬಹುದು. ಮಾತ್ರವಲ್ಲ, 'ತೌರಾತ್' ಪ್ರತೀಕಾರವನ್ನು ಮಿತಿಮೀರಿ ಉಪದೇಶಿಸುವಂತೆಯೇ 'ಇಂಜೀಲ್' ಕ್ಷಮಾದಾನವನ್ನು ಮಿತಿಮೀರಿ ಉಪದೇಶಿಸುತ್ತದೆ. ಇದು ಇಂಜೀಲಿನ ಇನ್ನೊಂದು ನ್ಯೂನತೆಯಾಗಿದೆ. ಈ ಎರಡೂ ಧರ್ಮಗ್ರಂಥಗಳು ಮಾನವ ವೃಕ್ಷದ ಎಲ್ಲ ಕೊಂಬೆಗಳ ಕುರಿತು ಗಮನ ಹರಿಸಿಲ್ಲ. ಈ ಮರದ ಒಂದು ಕೊಂಬೆಯನ್ನು ತೌರಾತ್ ಪೋಷಿಸುತ್ತದೆ. ಇನ್ನೊಂದು ಕೊಂಬೆಯನ್ನು ಇಂಜೀಲ್ ತನ್ನ ವಶವಿರಿಸಿದೆ. ಇವೆರಡೂ ಉಪದೇಶಗಳು ಮಧ್ಯ ಮಾರ್ಗದಿಂದ ದೂರವಿವೆ. ಏಕೆಂದರೆ

ಎಲ್ಲ ಸಂದರ್ಭಗಳಲ್ಲೂ ಪ್ರತೀಕಾರ ಕೈಗೊಳ್ಳುವುದು ಮತ್ತು ಶಿಕ್ಷೆ ನೀಡುವುದು ಯಾವ ಪ್ರಕಾರ ಅಯೋಗ್ಯವಾಗಿದೆಯೋ ಅದೇ ಪ್ರಕಾರ ಸದಾಕಾಲ ಕ್ಷಮೆ ನೀಡುತ್ತಿರುವುದು ಸಹ ಮನುಷ್ಯ ಸುಧಾರಣೆಗಿರುವ ದಾರಿಗೆ ವಿರೋಧವಾಗಿದೆ. ಈ ಕಾರಣದಿಂದಲೇ ಪವಿತ್ರ ಖುರ್‌ಆನ್ ಈ ಎರಡು ಉಪದೇಶಗಳನ್ನು ಸರಿಪಡಿಸಿ ಹೀಗೆಂದು ಉಪದೇಶಿಸಿದೆ: **'ವ ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ ಫಮನ್ ಅಫಾ ವ ಅಸ್‌ಲಹ ಫಅಜ್‌ರುಹೂ ಅಲಲ್ಲಾಹಿ'** **(42:41).** ಅಂದರೆ ಕೆಡುಕಿಗಿರುವ ಪ್ರತಿಫಲ ಅದಕ್ಕನುಗುಣವಾದ ಶಿಕ್ಷೆಯಾಗಿದೆ. (ಇದು ತೌರಾತಿನ ಉಪದೇಶ ಪ್ರಕಾರವಾಗಿದೆ). ಆದರೆ (ಇಂಜೀಲಿನ ಉಪದೇಶದ ಪ್ರಕಾರ) ಕ್ಷಮಾದಾನದಿಂದ ಉತ್ತಮ ಪರಿಣಾಮ ಉಂಟಾಗುವುದಾದರೆ ಮತ್ತು ಕ್ಷಮೆ ಗಳಿಸಿದವನು ಇದರಿಂದ ಸುಧಾರಣೆ ಹೊಂದುವನಾದರೆ ಮಾತ್ರ ಕ್ಷಮೆಯು ಯೋಗ್ಯವಾಗುವುದು. ಇಲ್ಲದಿದ್ದರೆ ತೌರಾತ್ ಪ್ರಕಾರದ ಶಿಕ್ಷಾ ನಿಯಮವೇ ಅನ್ವಯವಾಗುವುದು.

* * *